# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


Sampreethi - Samruddhi | Volume : 7 | Issue : 4 | August 2024 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 7 | ಸಂಚಿಕೆ : 4 | ಆಗಸ್ಟ್ 2024 | ಪುಟಗಳು : 32 | ₹ 20 ರೂ.


## ಸ್ವಾತಂತ್ರ್ಯ ದಿನಾಚರಣೆಯ

## ಶುಭಾಶಯಗಳು



**ವರಮಹಾಲಕ್ಷ್ಮಿ**
**ಹಬ್ಬದ**
**ಶುಭಾಶಯಗಳು**



|| JAI SRI GURUDEV ||

SRI ADICHUNCHANAGIRI SHIKSHANA TRUST(R)

# Adichunchanagiri Institute of Technology

AFFILIATED TO VISVESVARAYA TECHNOLOGICAL UNIVERSITY, BELAGAVI
APPROVED BY AICTE NEW DELHI AND RECOGNIZED BY GOVT. OF KARNATAKA.
ACCREDITED BY NAAC WITH "A" GRADE (CYCLE - II)
CHIKKAMAGALURU



ACCREDITED WITH GRADE A NAAC

www.aitckm.edu.in

# ADMISSIONS OPEN

Academic Year : 2024-25

Since 1980

## COURSES OFFERED

### B.E.COURSES

1. ARTIFICIAL INTELLIGENCE AND MACHINE LEARNING
2. CIVIL ENGINEERING
3. COMPUTER SCIENCE AND ENGINEERING
4. COMPUTER SCIENCE AND ENGINEERING (DATA SCIENCE)
5. ELECTRONICS AND COMMUNICATION ENGINEERING
6. ELECTRICAL AND ELECTRONICS ENGINEERING
7. INFORMATION SCIENCE AND ENGINEERING
8. MECHANICAL ENGINEERING
9. ROBOTICS AND ARTIFICIAL INTELLIGENCE New

### MASTER DEGREE COURSES

**M.Tech**

1. STRUCTURAL ENGINEERING **(Civil. Engg.)**
2. COMPUTER SCIENCE AND ENGINEERING **(CS & Engineering)**
3. DIGITAL ELECTRONICS AND COMMUNICATION SYSTEM **(E & C Engg.,)**

**MBA** (Master of Business Administration)

**B.E. COURSES**
CET CODE - E064, COMEDK CODE - E004

**M.Tech**
CET CODE - T803

**MBA**
CET CODE - B109

## SILENT FEATURES:

- VTU Ist Rank with Gold Medal - 2022-23
- Transportation Facility
- "A" Grade Accredited by NAAC
- Encouragement is given to merit students in the form of the Cash Awards & Gold Medals
- Over 200 University Ranks
- High Ambience with Blessed Nature
- Committed & Supportive Management
- Close to 100% Results Every Year
- Separate Hostel Facility for boys & girls
- Sprawling Campus of 60 acres
- State of the art Infrastructure & Laboratories
- Well Experienced and Qualified Faculty
- Placement Training & 100% Placement Assistance
- Curricular, Co-Curricular & Extra Curricular Activities
- Collaboration with Reputed Industries & Educational Institutes

## TRAINING AND PLACEMENTS

| | | | |
|---|---|---|---|
| 40+ Campus Placement Drive | 530+ Job Offers | Minimum Package 3.5 LPA | Highest Package 11.79 LPA |

## OUR TOP RECRUITERS

Clarivate Analytics, TCS, Cognizant, Rakuten, TEKsystems, HITACHI, Mercedes-Benz, wipro, HEXAWARE, IBM, Infosys, Capgemini

**For Admissions Contact:**

Dr. C.T. Jayadeva (Principal): 9448665711, Dr. C.K. Subbaraya (Director): 9448480343, Mr.N.S. Sagar(Registrar):9141133697/08262 220444

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

**ಆಗಸ್ಟ್ : 2024**

**ಸಂಪುಟ 7, ಸಂಚಿಕೆ 4**



ಸಂಪಾದಕರು

**ಡಾ॥ ಸಿ. ನಂಜುಂಡಯ್ಯ**



**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಂಪಾದಕರು

**ಸಂಪ್ರೀತಿ – ಸಮೃದ್ಧಿ**

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ – 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**

ಮುದ್ರಕರು

- **ಕಂಪ್ಯೂಟರ್ ವರ್ಲ್ಡ್**
  ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
  ಮಲ್ಲಿಗೆ ತೋಟ, ಮಾಗಡಿ ರಸ್ತೆ,
  ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com

✆ 8971608213

ಸಂಪ್ರೀತಿ – ಸಮೃದ್ಧಿ


## ಸಂಪಾದಕೀಯ

ನಮ್ಮೊಳಗಿರುವ ಜೀವ ಉರಿಯುತ್ತಿರುವ ದೀಪದಂತೆ: ದೇಹವು ಹಣತೆಯಂತೆ, ಮನಸ್ಸು ಬತ್ತಿಯಂತೆ, ಪ್ರಜ್ಞೆಯು ಜ್ವಾಲೆಯಂತೆ, ಜೀವಪ್ರಭೆಯೇ ದೇಹದಲ್ಲಿ ಪ್ರಕಾಶಿಸುತ್ತದೆ. ಒಂದು ವೇಳೆ ನಾವು ದೀಪವನ್ನು ಹೊತ್ತಿಸಿದರೆ ಅದರ ಬೆಳಕು ಸಮೀಪದಲ್ಲಿರುವ ಎಲ್ಲವನ್ನು ಬೆಳಗಿಸಬಹುದು, ಆದರೆ ಅದರ ಜ್ವಾಲೆ ಬೆಳಗುವ ವಸ್ತುಗಳನ್ನು ಎಳ್ಳಷ್ಟೂ ಗ್ರಹಿಸಲಾರದು ಅಥವಾ ಅದು ತನ್ನ ಇರುವಿಕೆಯನ್ನು ಕೂಡ ಅರಿಯಲಾರದು. ನಾವು ಸಾಮಾನ್ಯವಾಗಿ "ನಾನಿದ್ದೇನೆ" ಅಥವಾ "ನನಗೆ ಗೊತ್ತಿದೆ" ಎಂದೆಲ್ಲ ಹೇಳುವುದುಂಟು. ನಮ್ಮೊಳಗಿರುವ ಜ್ವಾಲೆ(ಪ್ರಜ್ಞೆ) ತನ್ನನ್ನು ತಾನು ಹಾಗೂ ತನ್ನೆದುರಿಗಿರುವ ವಸ್ತುಗಳನ್ನು ಗುರುತಿಸಬಲ್ಲುದು ಎಂಬುದನ್ನೇ ಅದು ಸೂಚಿಸುತ್ತದೆ. ಅದರಂತೆ ನಮ್ಮೊಳಗಿರುವ ಬೆಳಕು ಎಲ್ಲ ಬೆಳಕುಗಳ ತಾಯಿಯಾಗಿದೆ.

ಈ ಎರಡೂ ಬಗೆಯ ಬೆಳಕನ್ನು ಭಿನ್ನವಾಗಿಸುವ ಒಂದೇ ಒಂದು ವಸ್ತುವೇ ಜೀವವಾಗಿದೆ. ಇಲ್ಲಿರುವ ಈ ದೀಪವನ್ನು ಯಾರು ಹಚ್ಚಿದರು ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಆದರೆ ನಮ್ಮೊಳಗೆ ವರ್ಷಾನುವರ್ಷಗಳಿಂದ ಉರಿಯುತ್ತಿರುವ ಪ್ರಜ್ಞಾಜ್ವಾಲೆಯನ್ನು ಯಾರು ಅಥವಾ ಏಕೆ ಹೊತ್ತಿಸಿದರು ಎಂಬ ಬಗ್ಗೆ ಯಾರಿಗೂ ಗೊತ್ತಿಲ್ಲ ಎಂಬುದು ಅಚ್ಚರಿಯ ಸಂಗತಿಯಲ್ಲವೆ?

ನಮ್ಮ ಈ ಬದುಕು ಅಮೌಲ್ಯ. ದೀಪದಲ್ಲಿರುವ ಪಣತೆ, ಎಣ್ಣೆ ಬತ್ತಿಗಳಿಗಿಂತ ಅದರ ಬೆಳಕು ಮುಖ್ಯ. ಹಾಗೆ ನಮ್ಮ ಬದುಕಿನ ಹಣತೆಯಲ್ಲಿ ಜ್ಞಾನದ ಬೆಳಕು ಮುಖ್ಯ. ನಾವು ಎಷ್ಟು ದಿವಸ ಬದುಕಿದೆವು, ಏನನ್ನು ಗಳಿಸಿದೆವು ಎನ್ನುವುದು ಮುಖ್ಯವಲ್ಲ. ನಾವು ಅದೆಷ್ಟು ಪ್ರಸನ್ನರಾಗಿ, ಪ್ರಶಾಂತರಾಗಿ ಬದುಕಿದೆವು ಎನ್ನುವುದು ಮುಖ್ಯ. ಆದರೆ ನಮಗೆ ಇಂದು ಬದುಕಿನಲ್ಲಿ ಪ್ರಸನ್ನತೆಗಿಂತ ಪ್ರಶಸ್ತಿಗಳೇ ಮುಖ್ಯವಾಗಿವೆ. ಸಿರಿ–ಸಂಪದ ವಸ್ತು ವಡವೆ, ಅಧಿಕಾರ ಅಂತಸ್ತುಗಳೇ ಪ್ರಧಾನವೆನಿಸಿವೆ.

ದೇವರು ನಮಗೆ ಸಮರ್ಥವಾದ ದೇಹವನ್ನು ಕೊಟ್ಟ. ನೂರು ವರುಷ ನಡೆದರೂ ದಣಿಯದ ಕಾಲುಗಳು, ನೂರು ವರುಷ ದುಡಿದರೂ ದಣಿಯದ ಕೈಗಳು ಜೊತೆಗೆ ಎಂಥ ಸುಂದರವಾದ ಮನಸ್ಸನ್ನು ಕೊಟ್ಟ ! ಪ್ರಪಂಚವನ್ನೂ ಪರಮಾತ್ಮನನ್ನೂ ಪ್ರೀತಿಸುವ ಸಾಮರ್ಥ್ಯ ಈ ಮನಸ್ಸಿಗೆ ! ಸಮಸ್ತ ಪ್ರಪಂಚವನ್ನೇ ಬೆಳಗುವ ಬೃಹದ್ದೀಪಗಳನ್ನೇ ಆಗಸದಲ್ಲಿ ದೇವರು ಹೊತ್ತಿಸಿಟ್ಟ. ಹಳ್ಳ–ಕೊಳ್ಳ, ನದಿ–ನಾಲೆ, ಸರೋವರ–ಸಾಗರಗಳ ನಿರ್ಮಿಸಿದ. ಹಾಲು–ಹಣ್ಣು, ಕಾಳು–ಕಡಿ ಏನೆಲ್ಲ ಕೊಟ್ಟ ! ॐ



# ವರಮಹಾಲಕ್ಷ್ಮಿ ವ್ರತ

## ತನ್ನಿಮಿತ್ತ ಈ ಸಕಾಲಿಕ ಚಿಂತನೆ

ಓಂ –ಡಾ. ಗುರುರಾಜ ಪೋಶೆಟ್ಟಿಹಳ್ಳಿ,
ಸಂಸ್ಕೃತಿ ಚಿಂತಕರು

ಶ್ರಾವಣದಲ್ಲಿ ಬರುವ ಪ್ರಮುಖ ಹಬ್ಬಗಳ ಪೈಕಿ ಶ್ರೀ ವರಮಹಾಲಕ್ಷ್ಮೀ ಹಬ್ಬವೂ ಒಂದು. ಇದು ಮುತ್ತೈದೆಯರೆ ಆಚರಿಸುವ ವಿಶೇಷ ವ್ರತ. ಧನ ಸಂಪತ್ತಿನ ಒಡತಿಯ ಆರಾಧನೆಯಷ್ಟೇ ಅಲ್ಲ, ವಿದ್ಯಾ ಬುದ್ಧಿ, ಧಾನ್ಯ ಸೇರಿ ಎಲ್ಲ ಒಳಿತುಗಳನ್ನು ಆಹ್ವಾನಿಸುವುದಕ್ಕೆ ಇರುವ ವ್ರತ ಎಂದರೆ ತಪ್ಪಿಲ್ಲ. ಹೀಗಾಗಿ ಇದು ಲೋಕೋದ್ಧಾರದ ವ್ರತಾಚರಣೆಯೂ ಹೌದು.

ಶ್ರಾವಣ ಮಾಸವನ್ನು ಹಬ್ಬಗಳ ಹೆಬ್ಬಾಗಿಲು ಎಂದರೆ ತಪ್ಪಾಗಲಾರದು ಕಾರಣ ಅಲ್ಲಿಂದ ಪ್ರಾರಂಭ ಆಗುವ ಹಬ್ಬಗಳು ಕುಟುಂಬ ಸಮೇತ ನಾನಾ ವಿಧದಲ್ಲಿ ದೇವತಾರಾಧನೆಯನ್ನು ಮಾಡಲು ಅನುವು ಮಾಡಿಕೊಡುತ್ತವೆ. ಶ್ರಾವಣ ಮಾಸದಲ್ಲಿ ನಾಗರ ಪಂಚಮಿಯ ನಂತರ ಬರುವ ಪ್ರಮುಖವಾದ ಹಬ್ಬ ಶ್ರೀ ವರಮಹಾಲಕ್ಷ್ಮೀ ವ್ರತ. ಸಾಮಾನ್ಯವಾಗಿ ಲಕ್ಷ್ಮೀ ಎಂದರೆ ನಮಗೆ ಹಣ ಹಾಗೂ ಐಶ್ವರ್ಯ ಮಾತ್ರ ನೀಡುವ ದೇವತೆ ಎಂಬ ಕಲ್ಪನೆ ಇದೆ. ಆದರೆ ಸತ್ಯವಾಗಿ ನೋಡಿದರೆ ವಿದ್ಯಾವೀಣಾ ಲಕ್ಷ್ಮೀ ಆಗಿ ವಿದ್ಯಾರ್ಥಿಗಳಿಗೆ ವಿದ್ಯೆ ಧಾನ್ಯ ಲಕ್ಷ್ಮೀ ಸ್ವರೂಪದಲ್ಲಿ ರೈತರಿಗೆ ಹಾಗೂ ನಮ್ಮ ಮನೆಗಳಲ್ಲಿ ಧಾನ್ಯ ತುಂಬಿ ವೀರ ಲಕ್ಷ್ಮೀ ಆಗಿ ಎಲ್ಲೆಡೆ ನಮಗೆ ಜಯ ತಂದುಕೊಡಲು ಅಷ್ಟಲಕ್ಷ್ಮೀ ಸ್ವರೂಪದಲ್ಲಿ ಆ ಲಕ್ಷ್ಮೀದೇವಿ ನಿರಂತರವಾಗಿ ಅವಶ್ಯ. ಅಂಥಃ ಮಹಾಲಕ್ಷ್ಮೀ ದೇವಿಯನ್ನು ಶ್ರಾವಣ ಮಾಸದ ಹುಣ್ಣಿಮೆಗೂ ಮೊದಲು ಬರುವ ಶುಕ್ರವಾರದಂದು ವರಮಹಾಲಕ್ಷ್ಮೀ ಸ್ವರೂಪದಲ್ಲಿ ಆಚರಣೆ ಮಾಡಲು ಭವಿಷೋತ್ತರ ಪುರಾಣದಲ್ಲಿ ಸಾಕ್ಷಾತ್ ಪರಶಿವನೆ ತಿಳಿಸುತ್ತಾನೆ.

### ಲಕ್ಷ್ಮಿಯ ಮೂಲ

ನಾನಾ ರೂಪಗಳಲ್ಲಿರುವ ಲಕ್ಷ್ಮಿಯು ಸಮುದ್ರದಲ್ಲಿ ಕಾಣಿಸಿಕೊಂಡಳೆಂದು ಪುರಾಣದಲ್ಲಿದೆ. ಸಮುದ್ರ ಯಾವುದೋ ಒಂದು ವರ್ಗಕ್ಕೆ ಸೇರಿರುವ ಒಂದು ಪ್ರದೇಶವಲ್ಲ. ಅದು ಈ ಪ್ರಪಂಚಕ್ಕೆ ಸೇರಿರುವ ಅಗಾಧ ಜಲರಾಶಿ. ಅಲ್ಲಿಂದ ಬಂದಿರುವ ಲಕ್ಷ್ಮಿದೇವಿಯಾದರೂ ಎಲ್ಲರ ಆಸ್ತಿ. ಅದೊಂದು ಹೆಣ್ಣು ಎಂಬುದು ಅಲಂಕಾರಿಕ ಕಲ್ಪನೆಯಷ್ಟೆ. ನದ ಪುರುಷನಾದರೆ, ನದಿ ಸ್ತ್ರೀ ಎನ್ನುವುದೂ, ನದಿಗಳೆಲ್ಲವೂ ಪತಿಯಾದ ಸಮುದ್ರ ರಾಜನಲ್ಲಿ ಒಂದಾಗುವುದೆಂಬುದೂ ಅರ್ಥಪೂರ್ಣವಾದ ಕಲ್ಪನೆ. ಅದನ್ನು ಇದ್ದ ಹಾಗೆಯೇ ತಿಳಿದುಕೊಂಡರೆ ಒಳ್ಳೆಯದು. ಇಲ್ಲದ ಕಲ್ಪನೆಯನ್ನು ಇದೆಯೆಂದು ಕೊಂಡರೆ ಅನರ್ಥವಾಗಬಹುದು.

ತಾವರೆಯಲ್ಲಿ ಲಕ್ಷ್ಮಿಯಿದ್ದಾಳೆ ಎಂದರೆ, ತಾವರೆ ಸುಂದರವಾಗಿದೆ ಎಂದು ಅರ್ಥವಾಗುತ್ತದೆ. ಒಬ್ಬನು ಸಿರಿವಂತನೆಂದರೆ, ಸಿರಿ(ಶ್ರೀ)ಯೆಂಬ ಹೆಣ್ಣು ಅವನ ಬಳಿಯಿದೆ ಎಂಬ ಅರ್ಥವೇನೂ ಆಗುವುದಿಲ್ಲ. ಅನೇಕರು ಸಿರಿವಂತರಿರುತ್ತಾರೆ. ತಾವರೆಗಳೆಲ್ಲವೂ ಲಕ್ಷ್ಮಿಯ ಆಸನ. ಹೀಗೆ ಪ್ರಕೃತಿಯಲ್ಲಿ ಒಂದಾಗಿರುವ ತತ್ವವನ್ನು ಒಂದೊಂದು ಭಾಷೆಯಲ್ಲಿ ಒಂದೊಂದು ಹೆಸರಿನಲ್ಲಿ ಕರೆಯಲಾಗುತ್ತದೆ. ಅಂತಹ ಸಂದರ್ಭದಲ್ಲಿ ಅರ್ಥ ಒಂದೇ ಆದರೂ ಹೆಸರು

ಹಲವಾರು. ಲಕ್ಷ್ಮಿಯೆಂಬ ಸಂಸ್ಕೃತ ಶಬ್ಧ ಕನ್ನಡದಲ್ಲಿ ಲಕುಮಿ, ಲಚುಮಿ, ಲಚ್ಮಿ, ಲಚ್ಚಿ ಎಂದೆಲ್ಲಾ ಆಗಬಹುದು. ಅವುಗಳ ಅರ್ಥವೊಂದೇ ಇರುತ್ತದೆ. ಅಲ್ಪ ಸ್ವಲ್ಪ ವ್ಯತ್ಯಾಸ ತೋರಿದರೂ ತೊಂದರೆಯೇನೂ ಅಲ್ಲ. ವರಮಹಾಲಕ್ಷ್ಮಿಗೂ ಈ ಮಾತು ಅನ್ವಯಿಸುತ್ತದೆ. ಅದನ್ನು ಸಂಸ್ಕೃತದಲ್ಲಿ ಪೂಜಿಸುವಂತೆ ಬೇರೆಯ ಭಾಷೆಯಲ್ಲಿಯೂ ಸ್ತುತಿಸಬಹುದು.

**ಲಕ್ಷ್ಮಿಯ ಪೂಜೆ**

ಹೀಗೆ ಹೇಳಿದರೆ ಲಕ್ಷ್ಮಿಯು ಸೃಷ್ಟಿಯೆಂದಾಗಬುದು. ಆದರೆ ಈ ಶಬ್ದಸೃಷ್ಟಿಯ ಹೊರತಾಗಿಯೂ ಲಕ್ಷ್ಮಿಯ ತತ್ವವಿದೆ. ಅದು ಪರಮಾತ್ಮನ ಹೃದಯ ಮಂದಿರಲ್ಲಿದೆ. ನಮ್ಮ ಕಣ್ಣಿಗೆ ಕಾಣದಿರುವ ಪರಮಾತ್ಮನು ಶ್ರೀರಾಮನೋ ಶ್ರೀಕೃಷ್ಣನೋ ಆದಂತೆಯೇ ಅವನ ಮನೋಮಂದಿರ ನಿವಾಸಿನಿಯೂ ಆಗುತ್ತಾಳೆ. ಅವಳು ಸೀತಾ, ರುಕ್ಮಿಣಿ ಮುಂತಾದ ರೂಪಗಳನ್ನು ಕಾಣಿಸಿಕೊಳ್ಳುತ್ತಾಳೆ. ನಾನಾ ರೂಪಗಳನ್ನು ಹೊಂದಿ ಪ್ರಪಂಚದಲ್ಲಿ ಕ್ರೀಡಿಸುತ್ತಾಳೆ. ಅವಳನ್ನು ನಮಗೆ ಬೇಕಾದ ಬಗೆಯಲ್ಲಿ ಪೂಜಿಸಿ ಬೇಕು ಎನ್ನುವುದನ್ನು ಪಡೆಯಬಹುದು, ಬೇಡ ಎನ್ನುವುದನ್ನು ನಿವಾರಿಸಬಹುದು. ಇದು ಎಲ್ಲಾ ಭಕ್ತರ ಅನುಭವದಲ್ಲಿದೆ. ಈ ಕಾರಣದಿಂದಲೇ ಕಲಶದಲ್ಲಿ ಪೂಜಿಸುವುದುಂಟು. ಚಿತ್ರವನ್ನು ಅಲಂಕರಿಸುವುದುಂಟು. ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಬೇರೆಯ ಭಾಷೆಯಲ್ಲಿಯೂ ಪದ್ಯಗಳನ್ನು ಹೇಳುವುದುಂಟು. ಆದರೆ ಸಂಸ್ಕೃತ ಪೂಜೆಗಾಗಿಯೇ ಇರುವ ಭಾಷೆ. ಅದನ್ನು ಬಳಸಿದರೆ ಮಾತ್ರ ಪೂಜೆ ಮಾಡಿದಂತೆ ಆಗುತ್ತದೆ ಎಂದು ಹಲವರ ನಂಬಿಕೆ. ಅದೇ ಬಗೆಯಲ್ಲಿ ಬೇರೆಯ ಭಾಷೆಯಲ್ಲಿ ಪೂಜಿಸಿ, ಅದೇ ಮನೋವಸ್ಥೆಯನ್ನು ಯಾರಾದರೂ ಪಡೆಯಬಲ್ಲರು ಎಂದಾದರೆ ಅದನ್ನು ಯಾರು ನಿರಾಕರಿಸುತ್ತಾರೆ?

ಒಮ್ಮೆ ಶಿವ–ಪಾರ್ವತಿಯರು ಚದುರಂಗವಾಡುತ್ತಿದ್ದರು. ಎಲ್ಲಾ ಆಟಗಳಲ್ಲಿಯೂ ಪಾರ್ವತಿಯೇ ಗೆದ್ದರೂ ಶಿವನು ವಾದಿಸುತ್ತಿದ್ದ. ಅದಕ್ಕೆ ಪಾರ್ವತಿಯು ಮಧ್ಯಸ್ಥನೊಬ್ಬನಿರಬೇಕೆಂದು ಬಯಸಿದಳು. ಅದರಂತೆ ಚಿತ್ರನೇಮಿ ಎಂಬುವನು ನಿರ್ಣಾಯಕ ಸ್ಥಾನದಲ್ಲಿ ಇಟ್ಟುಕೊಂಡು ಆಟವನ್ನು ಮುಂದುವರಿಸಲಾಯಿತು. ಆದರೆ ಪರಿಣಾಮವು ಸಮಾನವಾಗಿತ್ತು. ಚಿತ್ರನೇಮಿಯು ಶಿವನ ಪಕ್ಷಪಾತಿಯಾಗಿ ತೀರ್ಪು ನೀಡುತ್ತಿದ್ದ ಕಾರಣ, ಪರ್ವತಕುಮಾರಿಗೆ ಕೋಪ ಬಂದಿತು. ಅವನು ಸ್ಥಿರರೋಗಿಯಾಗಲೆಂದು ಅವಳು ಶಪಿಸಿದಳು. ಇದರಿಂದ ಖಿನ್ನವಾದ ಚಿತ್ರನೇಮಿಯ ಕ್ಷಮಿಸುವಂತೆ ಪಾರ್ವತಿಯನ್ನು ಪರಿಪರಿಯಾಗಿ ಬೇಡಿಕೊಂಡನು. ಪ್ರಸನ್ನಳಾದ ಪಾರ್ವತಿಯು ವರಲಕ್ಷ್ಮಿಯನ್ನು ಪೂಜಿಸಿ ಶಾಪಮುಕ್ತನಾಗುವಂತೆ ಅನುಗ್ರಹಿಸಿದಳು. ಅಂದಿನಿಂದ ಆರೋಗ್ಯಭಾಗ್ಯಕ್ಕಾಗಿ ಈ ವ್ರತವನ್ನು ಎಲ್ಲರೂ ಆಚರಿಸುತ್ತಾರೆ. ವೈಷ್ಣವ ದೇವತೆಯೊಂದು ಶೈವಸಮುದಾಯದಲ್ಲಿಯೂ ಪೂಜೆ ಪಡೆಯುವುದನ್ನು ಇದು ಸೂಚಿಸುತ್ತದೆ. ಲಕ್ಷ್ಮಿಪೂಜೆಯು ಶೈವ–ಶಾಕ್ತಾದಿ ಭೇದಗಳನ್ನೂ ಉಲ್ಲಂಘಿಸಿ ಸಮಸ್ತರ ಮಾನ್ಯತೆ ಪಡೆದಿದೆ ಎಂಬಲ್ಲಿ ಯಾವುದೇ ಸಂಶಯವಿಲ್ಲ. ವರಲಕ್ಷ್ಮಿ ಪೂಜೆಯು ಮಳೆಗಾಲದ ಅನಾರೋಗ್ಯವನ್ನು ನಿವಾರಿಸುವುದಕ್ಕಾಗಿಯೂ ಆರೋಗ್ಯವನ್ನು ಪಡೆಯುವುದಕ್ಕಾಗಿಯೂ ಇದೆಯೆಂಬುದನ್ನು ಇಲ್ಲಿ ಕಾಣಬಹುದು.

**ಪೂಜೆಯ ವಿಧಾನ**

ನಮ್ಮ ಸಂಸ್ಕೃತಿಯು ಪುರುಷ ಪ್ರಧಾನವೆಂದು ಹೇಳುವವರೆಲ್ಲರೂ ಈ ಪೂಜೆಯು ಸ್ತ್ರೀ ಕರ್ತೃಕವೆಂಬುದನ್ನು ಗಮನಿಸಬೇಕು. ಸುವಾಸಿನಿಯರು ತಮ್ಮ ಕುಟುಂಬದ ಸುಖ–ಸೌಭಾಗ್ಯವನ್ನು ಬಯಸಿ ಮಾಡುವ ಈ ಪೂಜೆಯ ವಿಧಾನ ಆಧುನಿಕ ಕಾಲದಲ್ಲಿ ನವೀನತೆಯನ್ನು ಪಡೆದಿದೆ. ದೇವಾಲಯಗಳನ್ನು ಸಂದರ್ಶಿಸುವಂತೆ, ದೂರದರ್ಶನವನ್ನು ನೋಡಿಯೂ ವ್ರತವನ್ನು ಮಾಡುವ ರೂಢಿ ಬರುತ್ತಿದೆ. ಪುರೋಹಿತರು ಇಲ್ಲದೆಯೂ ಈ ವ್ರತವನ್ನು ಆಚರಿಸುವ ವಿನೂತನ ವಿಧಾನ ಬಳಕೆಯಲ್ಲಿದೆ. ಇಲ್ಲಿ ಗಮನಿಸಬೇಕಾದುದು ಭಕ್ತಿಯೇ ಹೊರತು, ವಿಧಾನವಲ್ಲ. ಪತ್ರ ಪುಷ್ಪ ಫಲ ನೀರು ಮುಂತಾದ ಸಾಮಗ್ರಿಯು ಭಕ್ತಿಪೂರ್ವಕವಾಗಿದ್ದರೆ ಮಾತ್ರ ಭಗವತಿಯು ಸಂತುಷ್ಟಳಾಗಿ ಕಾಮನೆಗಳನ್ನು ಈಡೇರಿಸುತ್ತಾಳೆ. ಸಂಗೀತ ಸೇವೆಯ ಮೂಲಕ ವರಲಕ್ಷ್ಮಿಯನ್ನು ಸಂತೋಷ ಪಡಿಸುವಂತೆ ಸಾಹಿತ್ಯದ ಮೂಲಕವೂ ಸಂತೋಷಪಡಿಸಬಹುದು. ಹಾಗೆಂದರೆ, ಕುಲಪರಂಪರೆಯನ್ನು ಅನುಸರಿಸಿ ಪೂಜೆ ಮಾಡುವಂತೆ, ಕನ್ನಡದಲ್ಲಿರುವ

ಹಾಡುಗಳ ಮೂಲಕವೂ, ವರಲಕ್ಷ್ಮಿಯ ಮಹಿಮೆಯನ್ನು ಬಿಂಬಿಸುವ ಪುರಾಣ–ಪುಣ್ಯಕಥೆಗಳನ್ನು ಓದುವ ಮೂಲಕವೂ ಆರಾಧಿಸಬಹುದು.

**ಅಷ್ಟಲಕ್ಷ್ಮಿಯರು**

ಮೋಕ್ಷಲಕ್ಷ್ಮಿ–ಮಹಾಲಕ್ಷ್ಮಿ, ಜಯಲಕ್ಷ್ಮಿ, ಧನಲಕ್ಷ್ಮಿ, ರಾಜಲಕ್ಷ್ಮಿ, ಧೈರ್ಯಲಕ್ಷ್ಮಿ, ಶೌರ್ಯಲಕ್ಷ್ಮಿ, ಸಿದ್ಧಿಲಕ್ಷ್ಮಿ ಎಂಬ ಎಂಟು ಲಕ್ಷ್ಮಿಯರನ್ನು ಬ್ರಹ್ಮಾಂಡ ಪುರಾಣ ಹೇಳಿದೆ. ಆದಿಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಗಜಲಕ್ಷ್ಮಿ, ಸಂತಾನ ಲಕ್ಷ್ಮಿ, ವೀರಲಕ್ಷ್ಮೀ, ವಿಜಯಲಕ್ಷ್ಮೀ, ವಿದ್ಯಾಲಕ್ಷ್ಮೀ, ಎಂದು ಎಂಟು ಲಕ್ಷ್ಮೀಯರನ್ನು ಅಷ್ಟಲಕ್ಷ್ಮೀ ಸ್ತೋತ್ರ ಗ್ರಂಥದಲ್ಲಿ ಹೇಳಿರುವುದನ್ನು ಕಾಣಬಹುದು. ಐಶ್ವರ್ಯಲಕ್ಷ್ಮೀ, ಸೌಭಾಗ್ಯಲಕ್ಷ್ಮೀ, ರಾಜಲಕ್ಷ್ಮೀ, ವರಲಕ್ಷ್ಮೀ ಎಂಬ ಹೆಸರು ಅಲ್ಲಲ್ಲಿ ಕಾಣುತ್ತದೆ. ದೇಶ ವಿದೇಶಗಳಲ್ಲಿ ಈ ಲಕ್ಷ್ಮೀ ಮಂದಿರಗಳನ್ನು ಆಧುನಿಕವಾಗಿ ನಿರ್ಮಿಸಿದ್ದಾರೆ. ಲಕ್ಷ್ಮೀದೇವಿಯ ವಿವಿಧ ರೂಪಗಳನ್ನು ಇವು ತೋರಿಸುತ್ತವೆ. ಅಥವಾ ಲಕ್ಷ್ಮೀ ನೀಡುವ ವರಗಳನ್ನು ಇವು ಸೂಚಿಸುತ್ತವೆ. ವರವನ್ನು ನೀಡುವ ಲಕ್ಷ್ಮೀ ಅಥವಾ ಎಲ್ಲರಿಗಿಂತ ಹೆಚ್ಚಿನ ಲಕ್ಷ್ಮೀ ಎನ್ನಬಹುದು. ಪ್ರಾಚೀನವಾದ ಮಂದಿರಗಳಲ್ಲಿ ಈ ಬಗೆಯ ವಿಭಾಗವನ್ನು ಮಾಡುವುದಿಲ್ಲ. ಕೊಲ್ಲಾಪುರದಲ್ಲಿ ಪ್ರಾಚೀನ ಲಕ್ಷ್ಮೀ ಮಂದಿರವಿದೆ. ಶ್ರಾವಣ ಮಾಸದಲ್ಲಿ ಆಚರಿಸುವ ವರಮಹಾಲಕ್ಷ್ಮೀ ಆರಾಧನೆ ಪ್ರಸಿದ್ಧವಾದುದು. 'ಲಕ್ಷ್ಮೀ' ಎಂದರೆ ಹಣ ಎನ್ನುವ ಅಥವಾ ಹಲವು ರೀತಿಯ ಪ್ರಾಪಂಚಿಕ ಸಂಪತ್ತು ಎನ್ನುವಂತಹ ಸಾಮಾನ್ಯವಾದ ಭಾವನೆಯನ್ನು ಮೀರಿ ನಿಲ್ಲುವ ಅವಳ ವಿಶ್ವರೂಪ ದರ್ಶನವನ್ನು ಕಾಣಲು ವೇದಮಂತ್ರಗಳ ಆಂತರ್ಯವನ್ನು ಅರಿಯಬೇಕಾಗಿದೆ.

ಶ್ರೀಸೂಕ್ತ

ಹಿರಣ್ಯವಾರ್ಣಾಂ ಹರಿಣೀ ಸುವರ್ಣರಜತಸ್ರಜಾಂ।

ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ॥

ಸಾಂಪ್ರದಾಯಕವಾಗಿ, ಪುರುಷಸೂಕ್ತದೊಡನೆ ಅನುಸಂಧಾನ ಮಾಡುವ ಶ್ರೀಸೂಕ್ತದ ಈ ಮೊದಲ ಮಂತ್ರದಲ್ಲಿ ದೇವತೆ ಜಾತವೇದನನ್ನು ಮೊದಲು ಆಹ್ವಾನಿಸಿ, ಲಕ್ಷ್ಮೀದೇವಿಯನ್ನು ಕರೆತರಲು ಪ್ರಾರ್ಥಿಸುವುದು ವೈಶಿಷ್ಟ್ಯ ಪೂರ್ಣವಾದುದು.ಸಾಮಾನ್ಯವಾಗಿ ಜಾತವೇದ ಎಂದರೆ ಅಗ್ನಿ ಎನ್ನುವ ಅರ್ಥವಿದೆ. ಆದರೆ, ಇಲ್ಲಿ ಅದು ಹುಟ್ಟಿರುವುದೆಲ್ಲವನ್ನೂ ಯಾರು ತಿಳಿಸಿದಿದ್ದಾರೋ, ಹುಟ್ಟಿರುವ ಎಲ್ಲ ಪ್ರಾಣಿಗಳೂ ಯಾರನ್ನು ತಿಳಿದಿವೆಯೋ ಹಾಗೂ ಯಾರು ಎಲ್ಲ ಪ್ರಾಣಿಗಳಲ್ಲಿಯೂ ಪ್ರಜ್ಞಾರೂಪದಲ್ಲಿರುವನೋ (ನಿರುಕ್ತ) ಅವನು ಅಂದರೆ ಪರಮಪುರುಷ – ಶ್ರೀನಾರಾಯಣ ಎನ್ನುವ ಅರ್ಥವನ್ನು ಕೊಡುತ್ತದೆ. ಹಾಗಾಗಿ, ಈ ಮಂತ್ರದಲ್ಲಿ, ಲಕ್ಷ್ಮೀದೇವಿಯನ್ನು ನಮ್ಮ ಬಳಿಗೆ ಕರೆತರಲು ಪ್ರಾರ್ಥಿಸಿರುವುದು ಶ್ರೀಮನ್ನಾರಾಯಣನನ್ನೇ ಎನ್ನುವುದು ವಿದಿತವಾಗುತ್ತದೆ. ಹಾಗೆಯೇ, ಲಕ್ಷ್ಮೀದೇವಿಯನ್ನು ನಿನ್ನ ಪತಿಯ ಅನುಗ್ರಹವನ್ನು ದೊರಕಿಸಿಕೊಡು ಎನ್ನುವಂತಹ ಪ್ರಾರ್ಥನೆಗಳು ಹಲವೆಡೆ ಕಾಣುತ್ತವೆ. ಶ್ರೀಸೂಕ್ತವೊಂದರಲ್ಲಿ ಮಾತ್ರವಲ್ಲದೆ, ಲಕ್ಷ್ಮೀದೇವಿಯು, ವೇದಪ್ರತಿಪಾದ್ಯ ಪರಮಪುರುಷ– ಪರತತ್ತ್ವದೊಂದಿಗೆ ಅವಿನಾಭವವಾಗಿರುವ ಶಕ್ತಿಯೇ ಆಗಿದ್ದಾಳೆ ಎಂಬಂತಹ ಪರದೇವತಾ ತತ್ತ್ವದ ಆಳವಾದ ದರ್ಶನವನ್ನು ದೇವಿಸೂಕ್ತಗಳ ಸಾಂಕೇತಿಕ ಅಂತರಾರ್ಥವು ತೆರೆದು ತೋರಿಸುತ್ತದೆ.

ದೇವತೆಗಳು 33 ಕೋಟಿ ಸಂಖ್ಯೆಯಲ್ಲಿದ್ದರೂ ನಮಗೆ ತಿಳಿದಿರುವ ದೇವತೆಗಳು ಕೆಲವೇ ಕೆಲವು. ಶಿವನೇ ಮಹಾದೇವನೆಂದು ಶೈವರು ಹೇಳಿದರೆ, ವಿಷ್ಣುವೇ ಲೋಕಸ್ವಾಮಿಯೆಂದು ವೈಷ್ಣವರು ಹೇಳುತ್ತಾರೆ.ಸೂರ್ಯ ಗಣಪತಿ ಅಂಬಿಕೆ ಷಣ್ಮುಖರಿಗೂ ಪ್ರಾಮುಖ್ಯ ದೊರೆಯುವುದುಂಟು. ಆದರೆ ನಿಜವಾಗಿ ನೋಡಿದರೆ ಲಕ್ಷ್ಮೀದೇವಿಗೆ ದೊರೆಯುವ ಪ್ರಾಧಾನ್ಯ ಇವರಲ್ಲಿ ಯಾರಿಗೂ ದೊರೆಯುವುದಿಲ್ಲ. ಸಂಪತ್ತಿನ ಅಧಿದೇವತೆಯಾದ ಮಹಾಲಕ್ಷ್ಮೀಯನ್ನು ತಿಳಿದೋ, ತಿಳಿಯದೆಯೋ ಲೋಕಮಾತೆಯೆಂದೂ ಎಲ್ಲರೂ ಆರಾಧಿಸುತ್ತಾರೆ. ಅವಳು ಎಲ್ಲರಿಗೂ ಬೇಕು. ಅವಳ ಕರುಣೆಯಿಲ್ಲದೆ ಯಾವನೂ ಸರಿಯಾಗಿ ಸಮೃದ್ಧಿಯಿಂದ ಜೀವಿಸಲಾರನು.

## ಮಹಾಲಕ್ಷ್ಮೀಯ ಪ್ರಾದುರ್ಭಾವ

ಈಗ ವೈವಸ್ವತಮನ್ವಂತರ ನಡೆಯುತ್ತಿದೆ. ಹಿಂದೆ ಚಾಕ್ಷುಷಮನ್ವಂತರದಲ್ಲಿ ದೇವತೆಗಳೂ ರಾಕ್ಷಸರಿಗೂ ಸೇರಿ ಅಮೃತವನ್ನು ಪಡೆಯಲೆಂದು ಪಾಲ್ಗಡಲನ್ನು ಕಡೆದಂತೆ. ಆಗ ಮೊದಲು ಕಾಲಕೂಟ ವಿಷವು ಉತ್ಪನ್ನವಾಯಿತು.ಅದನ್ನು ಶಿವನು ಪಾನ ಮಾಡಿದ ಮೇಲೆ ಎಲ್ಲರೂ ಸಾವಿನ ದವಡೆಯಿಂದ ಪಾರಾದರು. ಸಮುದ್ರಮಥನವನ್ನು ಮುಂದುವರಿಸಿದ ಮೇಲೆ ಉಚ್ಚೈಶ್ರವಸ್ಸು ಎಂಬ ಕುದುರೆ ಹುಟ್ಟಿತು. ಅದನ್ನು ಇಂದ್ರನು ತೆಗೆದುಕೊಂಡನು. ಆಮೇಲೆ ಕಲ್ಪವೃಕ್ಷ, ಕಾಮಧೇನು ಮುಂತಾದವುಗಳೂ ನಾನಾ ಬಗೆಯ ರತ್ನಗಳೂ ಲಭಿಸಿದವು. ಆಮೇಲೆ ಲಕ್ಷ್ಮೀದೇವಿಯು ಪ್ರಕಟಗೊಂಡಳು. ಅವಳನ್ನು ಪಡೆಯುವುದಕ್ಕಾಗಿ ದೇವಾಸುರ ಸದಸ್ಸಿನಲ್ಲಿ ಸ್ವಯಂವರವೇ ಪ್ರಕಟಗೊಂಡಳು. ಅವಳನ್ನು ಪಡೆಯುವುದಕ್ಕಾಗಿ ದೇವಾಸುರ ಸದಸ್ಸಿನಲ್ಲಿ ಸ್ವಯಂವರವೇ ನಡೆಯಿತು. ಲಕ್ಷ್ಮೀದೇವಿಯು ಪುರುಷೋತ್ತಮನನ್ನು ವರಿಸಿದಳು. ಮಹಾವಿಷ್ಣುವೇ ಮಹಾಸತಿಯಾದ ಲಕ್ಷ್ಮೀದೇವಿಯ ಪತಿ. ಅವನು ಅವತಾರ ಮಾಡಿದಂತೆ ಅವಳೂ ಅವತಾರ ಮಾಡುತ್ತಾಳೆ; ಅವರದು ಅವಿನಾಭಾವ ಸಂಬಂಧ.

## ಭಾಗ್ಯದ ನಿಧಿ ಕರವೀರಪುರ ವಾಸಿನಿ

ಭಗವಂತನ ಸೇವೆಗಾಗಿ ಈ ಕಲಿಯುಗದಲ್ಲಿ ದೇವಾನುದೇವತೆಗಳು ಯತಿಗಳಾಗಿ ಹರಿದಾಸರಾಗಿ ಅವತಾರ ಮಾಡಿ ಲೋಕೋದ್ಧಾರ ಮಾಡಿದ್ದಾರೆ. ಭಗವಂತನ ಅಂತರಂಗ ಭಕ್ತರಾದ ವಾಯುದೇವರು ತಮ್ಮ ಮೂರು ಅವತಾರಗಳಲ್ಲಿ ಭಗವಂತನ ಜೊತ ಲಕ್ಷ್ಮೀದೇವಿಯನ್ನು ಕೂಡಾ ಪರಿಪರಿಯಾಗಿ ಸ್ತುತಿ ಮಾಡಿದ್ದಾರೆ.

ದಾಸ ಎನ್ನುವ ಶಬ್ದ ಜಗಜ್ಜನನಿಯಾದ ಶ್ರೀ ಮಹಾಲಕ್ಷ್ಮೀಯಿಂದಲೇ ಪ್ರಾರಂಭ. ಸಾಕ್ಷಾತ್ ಲಕ್ಷ್ಮೀದೇವಿಯೇ ಪರಮಾತ್ಮನ ದಾಸಾನು ದಾಸಳಾಗಿದ್ದಾಳೆ. ಅದಕ್ಕೆ ಮಹಾನುಭಾವರಾದ ಶ್ರೀ ಪುರುಂದರ ದಾಸರು 'ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ' ಎಂದು ಉದ್ಧಾರ ತೆರೆದಿದ್ದಾರೆ. ಕೋಟಿ ಕೋಟಿ ಭಕ್ತರಿರಲು ಎಲ್ಲಾ ಜೀವರಾಶಿಗಳು ಭಗವತ್ ಅಧೀನವಾದರು ಮುಕ್ಕೋಟಿ ದೇವತೆಗಳು ಪರಮಾತ್ಮನಿಗೆ ದಾಸಾನುದಾಸರಾಗಿ ಸೇವೆ ಸಲ್ಲಿಸುತ್ತಾ ಇದ್ದರೂ ಎಲ್ಲ ದೇವತೆಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿದ್ದು ಅವರ ಮುಖಾಂತರ ತಾನೇ ಸರ್ವಚಿತ್ತನಾದ ಭಗವಂತನ ಸೇವೆಗಳನ್ನು ಪರಮಶ್ರೇಷ್ಠವಾಗಿ ಮಾಡುತ್ತಾ ಆನಂದ ಅನುಭವಿಸುತ್ತ ಲಕ್ಷ್ಮೀದೇವಿ ಸರ್ವತ್ರ ವ್ಯಾಪ್ತಳಾಗಿದ್ದಾಳೆ. ಸರ್ವೋತ್ತಮನಾದ ಶ್ರೀಹರಿಯು ಸಮಸ್ತ ದೇವೆತಗಳಿಗಿಂತ ಕೋಟಿ ಕೋಟಿ ಗುಣಗಳಿಂದ ಉತ್ತಮನಾಗಿದ್ದಾನೆ. ಭಗವಂತನಿಗೆ ಸಮಾನಳಾಗಿದ್ದಾಳೆ. ಬ್ರಹ್ಮ ರುದ್ರಾದಿ ದೇವತೆಗಳು ಶ್ರೀ ಮಹಾಲಕ್ಷ್ಮೀಯನ್ನು ನಿತ್ಯ ಸರ್ವದಾ ಸ್ತುತಿ ಮಾಡಿ ತೃಪ್ತರಾಗುತ್ತಾ ಇರುತ್ತಾರೆ.

## ಆಲದೆಲೆಯ ಮೇಲೆ ಮಲಗಿದವನಾ

ಭಗವಂತನು ಈ ಜಗತ್ತನ್ನು ಸೃಷ್ಟಿ ಮಾಡುವಾಗ ಸಮಸ್ತ ಲೋಕಗಳನ್ನು ತನ್ನ ಹೊಟ್ಟೆಯಲ್ಲಿ ಹಾಕಿಕೊಂಡಾಗ ಜಗತ್ ಪ್ರಳಯವಾದಾಗ ತಾನು ಮಗುವಾಗಿ ಆಲದೆಲೆಯ ಮೇಲೆ ಹಾಯಾಗಿ ಮಲಗಿದಾಗ ಸಾಕ್ಷಾತ್ ಲಕ್ಷ್ಮೀದೇವಿ ಆಲದೆಲೆ ಆಗಿ ಆತನ ಸೇವೆಯನ್ನು ಮಾಡುತ್ತಾ ಇದ್ದಾಳೆ ಮತ್ತೆ ಭಗವಂತನ ಸೃಷ್ಟಿ ಪ್ರಾರಂಭವಾಗಿ ಸೃಷ್ಟಿ ಸ್ಥಿತಿ ಲಯ ಕಾರ್ಯಗಳಲ್ಲಿ ಭಗವಂತನ ವ್ಯಾಪಾರಗಳಲ್ಲಿ ಭಾಗಿಯಾಗಿ ಜಗತ್ತಿನ ರಕ್ಷಣೆಯನ್ನು ಲಕ್ಷ್ಮೀದೇವಿ ಮಾಡುತ್ತಿದ್ದಾಳೆ.

ಭಗವಂತನ ಸೇವೆಗಾಗಿ ಈ ಕಲಿಯುಗದಲ್ಲಿ ದೇವಾನುದೇವತೆಗಳು ಯತಿಗಳಾಗಿ ಹರಿದಾಸರಾಗಿ ಅವತಾರ ಮಾಡಿ ಲೋಕೋದ್ಧಾರ ಮಾಡಿದ್ದಾರೆ. ಭಗವಂತನ ಅಂತರಂಗ ಭಕ್ತರಾದ ವಾಯುದೇವರು ತಮ್ಮ ಮೂರು ಅವತಾರಗಳಲ್ಲಿ ಭಗವಂತನ ಜೊತೆ ಲಕ್ಷ್ಮೀದೇವಿಯನ್ನು ಕೂಡಾ ಪರಿಪರಿಯಾಗಿ ಸ್ತುತಿ ಮಾಡಿದ್ದಾರೆ.

## ಭಕ್ತಿಯ ಪರವಶತೆ

ಅದೇ ಪರಂಪರೆಯಲ್ಲಿ ಬಂದ ಯತಿಗಳು, ಹರಿದಾಸ, ಹರಿದಾಸಿಣಿಯರು ಜಗಜ್ಜನನಿಯಾದ ಲಕ್ಷ್ಮೀದೇವಿಯನ್ನು

ತಮ್ಮ ಸ್ತೋತ್ರ ಹಾಗೂ ಹಾಡುಗಳಲ್ಲಿ ಭಕ್ತಿ ಪರವಶರಾಗಿ ಹೊಗಳಿದ್ದಾರೆ. ಶ್ರೀ ನರಹರಿ ತೀರ್ಥರಿಂದ ಪ್ರಾರಂಭವಾದ ಹರಿದಾಸ ಸಾಹಿತ್ಯ ಶ್ರೀ ಶ್ಯಾಮಸುಂದರ ದಾಸರವರೆಗೂ ಹಾಗೂ ಇನ್ನೂ ಎಲೆಮರ ಕಾಯಿಯಂತಿರುವ ಹರಿದಾಸರವರೆಗೂ ಪ್ರಸಿದ್ಧಿ ಹಾಗೂ ಅಚಂದ್ರಾರ್ಕವಾಗಿದೆ. ಇಂಥ ದಿವ್ಯವಾದ ಹರಿದಾಸ ಸಾಹಿತ್ಯದಲ್ಲಿ ಭಗವಂತನಾದ ಶ್ರೀಹರಿಯನ್ನು ಬಿಟ್ಟರೆ ಎರಡನೆಯ ಸ್ಥಾನ ಇರುವುದು ಶ್ರೀಮಹಾಲಕ್ಷ್ಮೀಗೆ.

**ಸಿರಿದೇವಿ ಸ್ತುತಿ ಸಂಪದ**

ದಾಸಕೂಟಕ್ಕೆ ಮುಕುಟ ಪ್ರಾಯವಾದ ಶ್ರೀಪಾದರಾಜರು, ಶ್ರೀವ್ಯಾಸರಾಜರು, ವಾದಿರಾಜ ಗುರುಗಳು ಮುಂತಾದ ಯತಿಶ್ರೇಷ್ಠರು ಸ್ತೋತ್ರ ಹಾಗೂ ಆಡುಭಾಷೆಯಾದ ಕನ್ನಡದಲ್ಲಿ ಹಾಡುಗಳನ್ನು ರಚನೆ ಮಾಡಿ ಜಗನ್ಮಾತೆಯನ್ನು ಸ್ತುತಿಸಿದರೆ ಕರ್ನಾಟಕ ಸಂಗೀತ ಪಿತಾಮಹ, ನಾರದಾಂಶ ಸಂಭೂತರಾದ ಶ್ರೀ ಪುರಂದರ ದಾಸರು ಸಾವಿರಾರು ಹಾಡುಗಳನ್ನು ಶ್ರೀಮಹಾಲಕ್ಷ್ಮೀಯ ಮೇಲೆ ರಚಿಸಿದ್ದಾರೆ. ಉದಾಹರಣೆಗೆ 'ಏನು ಧನ್ಯಳೋ ಲಕುಮಿ, ಪರಮಾತ್ಮನ ದಶಾವತಾರಗಳಲ್ಲಿ ಒಂದೊಂದು ಅವತಾರಕ್ಕೂ ಲಕ್ಷ್ಮೀದೇವಿಯನ್ನು ಬೇರೆ ಬೇರೆ ಹೆಸರುಗಳಿಂದ ಸ್ತುತಿಸಿದ್ದಾರೆ.ಮತ್ಸ್ಯನರಸಿ ವೇದಾವತಿ ಎಂಬ ಹಾಡಿನಲ್ಲಿ ಇನ್ನೂ ಅನೇಕ ಹಾಡುಗಳಿಂದ ಆಕೆಯನ್ನು ಸ್ತುತಿಸಿದ್ದಾರೆ. ಮುಂದೆ ವಿಜಯದಾಸರು ಅನೇಕ ಹಾಡುಗಳಾದ ಅಂದರೆ 'ವೇಣಿ ಮಾಧವನ ತೋರೆ, ಕ್ಷೀರವಾರಿಧಿ ಕನ್ನಿಕೆ, ಇನ್ನೂ ಅನೇಕ ಹಾಡು, ಸುಳಾದಿಗಳಲ್ಲಿ ಲಕ್ಷ್ಮೀದೇವಿಯ ಅಸ್ತಿತ್ವವನ್ನು ಎತ್ತಿ ತೋರಿಸಿದ್ದಾರೆ.

ಶ್ರೀ ಗೋಪಾಲದಾಸರು ತಮ್ಮ ಒಂದು ಕೃತಿಯಲ್ಲಿ 'ಒಲಿದೆಯಾ ಏಕಮ್ಮ ಲಕುಮಿ ವಾಸುದೇವಗೆ' ವಿಡಂಬನಾತ್ಮಕನಾಗಿ ಸ್ತುತಿಸಿದ್ದಾರೆ. ಅನಂತಾದ್ರಿಶರು 'ಬಾರೇ ಭಾಗ್ಯದ ನಿಧಿಯೇ' ಎಂದು ಹೇಳಿದರೆ 'ಇಂದಿರೆ ಇಂದು ವದನೆಯ' ಎಂದು ಅನೇಕ ಕೃತಿಗಳಿಂದ ಜಗನ್ನಾಥ ದಾಸರು ಸ್ತೋತ್ರಗೈದಿದ್ದಾರೆ. 'ಬಾರೇ ನಮ್ಮ ನಿ ತನಕ ಭಾಗ್ಯದ ದೇವಿ' ಎಂದು ಸಂಪತ್ತಿಗೆ ಅಭಿಮಾನಿಯಾದ ಲಕ್ಷ್ಮೀದೇವಿಯನ್ನು ಸ್ತೋತ್ರ ಮಾಡಿದ್ದಾರೆ. ಇಂದಿರೇಶದಾಸರು 'ಅಜ್ಞಾನವೆಂದು ಕತ್ತಲೆಯನ್ನು ಕಳೆದು ದಿವ್ಯದೃಷ್ಟಿ ದಯಪಾಲಿಸೆಂದು ಹೊಸಕಣ್ಣು ಹಚ್ಚಲಿ ಬೇಕು ಜಗದಂಬಾ' ಎಂದು ಸ್ತೋತ್ರ ಮಾಡಿದ್ದಾರೆ.

ಎಲ್ಲಾ ಹರಿದಾಸರು ತಮ್ಮ ಸಾಹಿತ್ಯದಲ್ಲಿ ಸಂಪತ್ತಿಗೆ ಅಭಿಮಾನಿ, ಜಗತ್ತಿನ ಎಲ್ಲಾ ಜೀವರಾಶಿಗಳಿಗೆ ಆಧಾರಳೂ, ರಕ್ಷಕಳೂ ಆದ ಜಗನ್ಮಾತೆಯಾದ ತಾಯಿ ಮಹಾಲಕ್ಷ್ಮೀಯನ್ನು ಭಕ್ತಿ ಪುರಸ್ಸರವಾಗಿ ಸ್ತೋತ್ರ ಮಾಡಿ ಹಾಡಿ ಭಕ್ತಿ ಪರಾಕಾಷ್ಠೆಯನ್ನು ಪ್ರದರ್ಶಿಸಿದ್ದಾರೆ. ಹೀಗೆ ಸಮಸ್ತ ದೇವತೆಗಳಿಂದ ಯತಿಪುಂಗವರಿಂದ, ಹರಿದಾಸರಿಂದ ಸ್ತೋತ್ರ ಮಾಡಲ್ಪಟ್ಟ ಜಗತ್ತಿನ ಸ್ಥಿತಿ, ಲಯ ಪಾಲನೆಗೆ ಪರಮಾತ್ಮನಿಗೆ ಸಹಾಯಕಳಾಗಿರುವ ಶ್ರೀ ಮಹಾಲಕ್ಷ್ಮಿಯ ಎಲ್ಲಾ ಜೀವರಾಶಿಗಳನ್ನು ಕರುಣಾ ದೃಷ್ಟಿಯಿಂದ ಕಾಪಾಡಲಿ ಎಂಬುದೇ ನಮ್ಮಾಸೆ.

**ವರವ ಕೊಡುವ ಮಹಾಲಕ್ಷ್ಮೀ**

ಬೆಳಗ್ಗೆ ಎದ್ದು ಸ್ನಾನ ಮಾಡಿ ಶುಚಿರ್ಭೂತರಾಗಿ ಮನೆಯಲ್ಲಿನ ದೇವರ ಕೋಣೆ ಅಥವಾ ಮನೆಯಲ್ಲಿ ದೊಡ್ಡ ಜಾಗದಲ್ಲಿ ಗೋಮೂತ್ರದಿಂದ ಸ್ಥಳ ಶುದ್ಧ ಮಾಡಿ ರಂಗೋಲಿ ಬಿಡಿಸಿ ಅಗ್ರ ಇರುವ ಎರಡು ಅಥವಾ ಐದು ಎಲೆ ಇಟ್ಟು ಅದರಲ್ಲಿ ಅಕ್ಕಿ ಹಾಕಿ ಕಲಶ ಇಟ್ಟು, ಆ ಕಲಶದಲ್ಲಿ ಒಣ ಅಥವಾ ಐದು ಬಾಳೆ ಇಟ್ಟು ಅದರಲ್ಲಿ ಅಕ್ಕಿ ಹಾಕಿ ಸಾಧ್ಯ ಆದಲ್ಲಿ ಬೆಳ್ಳಿ ಅಥವಾ ಬಂಗಾರದ ನಾಣ್ಯ ಹಾಕಿ ಸ್ವಲ್ಪ ಪರಿಶುದ್ಧವಾದ ಅರಿಶಿಣ ಚಿಟಿಕೆ ಹಾಕಿ ಶುದ್ಧವಾದ ನೀರು ತುಂಬಿ ಮಾವಿನ ಸೊಪ್ಪು ಹಾಕಿ ತೆಂಗಿನ ಕಾಯಿ ಇಡಬೇಕು. ಇನ್ನು ಕಲಶಕ್ಕೆ ಸೀರೆ ಆಭರಣ ಇತ್ಯಾದಿ ಅಲಂಕಾರ ಮಾಡಬಹುದು. ಕಲಶದ ಬುಡದಲ್ಲಿ ಒಂದು ಲಕ್ಷ್ಮೀಯ ಚಿಕ್ಕ ವಿಗ್ರಹ ಇಟ್ಟರೆ ಉತ್ತಮ. ಮೊದಲು ಮಹಾಗಣಪತಿಯನ್ನು ಪ್ರಾರ್ಥಿಸಿ. ನಂತರ,

ಪದ್ಮಾಸನೇ ಪದ್ಮಕರೇ ಸರ್ವ ಲೋಕೈಕ ಪೂಜಿತೇ ।
ನಾರಾಯಣಪ್ರಿಯೇ ದೇವಿ ಸುಪ್ರೀತಾ ಭವ ಸರ್ವದಾ ॥

ಎಂಬ ಮಂತ್ರಗಳಿಂದ ಮಹಾಲಕ್ಷ್ಮೀಯನ್ನು ಧ್ಯಾನಿಸಿ, ಆವಾಹಿಸಿ, ಅರ್ಘ್ಯ ಪಾದ್ಯ ಕೊಡಬೇಕು. ನಂತರ ಲಕ್ಷ್ಮೀದೇವಿಯ ಚಿಕ್ಕ ವಿಗ್ರಹಕ್ಕೆ ಹಾಲು ಮೊಸಲು ತುಪ್ಪ ಜೇನುತುಪ್ಪ ಸಕ್ಕರೆ ಹೀಗೆ ಪಂಚಾಮೃತ ಅಭಿಷೇಕ ಮಾಡಬೇಕು. ನಂತರ ದೇವಿಗೆ ಅಲಂಕಾರ ಮಾಡಿ ಅಂಗ ಪೂಜೆ ಹಾಗೂ ಬಿಲ್ವ, ದವನ, ಮರಗ ಇತ್ಯಾದಿ ಶ್ರೇಷ್ಠ ಪತ್ರೆಗಳಿಂದ ಅರ್ಚಿಸಬೇಕು. ನಂತರ ಲಕ್ಷ್ಮೀ ವಿಗ್ರಹಕ್ಕೆ ಪರಿಶುದ್ಧವಾದ ಕುಂಕುಮದಿಂದ ಅಷ್ಟೋತ್ತರ ಅರ್ಚನೆ ಮಾಡಿ ಧೂಪ ದೀಪ ಮಾಡಬೇಕು.ನಂತರ ಬೆಲ್ಲ ಹಾಗೂ ತುಪ್ಪದಲ್ಲಿ ಸಿಹಿ ತಿನಿಸು ಮಾಡಿ ನೈವೇದ್ಯ ಮಾಡಬೇಕು. ನೈವೇದ್ಯದಲ್ಲಿ ಹನ್ನೆರಡು ವಿಧದ ನೈವೇದ್ಯ ಮಾಡುವ ಪದ್ಧತಿ ಇದೆ. ಆದರೆ ಆ ಹನ್ನೆರಡೂ ವಿಧವೂ ಸಿಹಿ ಭಕ್ಷ್ಯಗಳೇ ಆಗಬೇಕು ಎಂದಿಲ್ಲ. ನೈವೇದ್ಯ ನಂತರ ತುಪ್ಪದ ಬತ್ತಿಯಲ್ಲಿ ಮಹಾಮಂಗಳಾರತಿ ಮಾಡಿ ಮಂತ್ರಪುಷ್ಪಾದಿಗಳನ್ನು ಸಮರ್ಪಿಸಬೇಕು. ನಂತರ ಒಂಭತ್ತು ಎಳೆ ಇರುವ ದಾರವನ್ನು ಅರಿಶಿಣದ ನೀರಿನಲ್ಲಿ ನೆನೆಸಿ ಹಿಂಡಿ ಅದಕ್ಕೆ ಒಂಭತ್ತು ಗಂಟು ಹಾಕಿ ಅದನ್ನು ಒಂದು ವೀಳ್ಯದ ಎಲೆಯ ಮೇಲೆ ಇಟ್ಟು

1) ಕಮಲಾಯೈ ನಮಃ 2) ರಮಾಯೈ ನಮಃ 3) ಲೋಕಮಾತ್ರೇ ನಮಃ 4) ವಿಶ್ವ ಜನನ್ಯೈ ನಮಃ 5) ಮಹಾಲಕ್ಷ್ಮೀ ನಮಃ 6) ಕ್ಷೀರಾಬ್ಧಿತನಯಾಯೈ ನಮಃ 7) ವಿಶ್ವ ಸಾಕ್ಷಿಣ್ಯೈ ನಮಃ 8) ಚಂದ್ರ ಸಹೋದರ್ಯೈ ನಮಃ 9) ಹರಿವಲ್ಲಭಾಯೈ ನಮಃ

ಹೀಗೆ ಒಂಭತ್ತು ಹೆಸರುಗಳನ್ನು ಹೇಳುತ್ತ ಅರಿಶಿಣ ಕುಂಕುಮ ಅಕ್ಷತೆಗಳಿಂದ ಆ ದಾರವನ್ನು ಅರ್ಚಿಸಿ ಹಿರಿಯ ಮುತ್ತೈದೆಯರಿಗೆ ಈ ದಾರ ಸಹಿತ ಹಸಿ ಮೊರದಲ್ಲಿ ಅಕ್ಕಿ ತೆಂಗಿನಕಾಯಿಗಳು ತಾಂಬೂಲ ಸಹಿತ ದಕ್ಷಿಣೆ, ಬಳೆ, ರವಿಕೆ ಖಣ ಅಥವಾ ಸೀರೆ ಇಟ್ಟು ವಾಯನದಾನ ಕೊಟ್ಟು ತಾನು ಸಹ ಒಂದು ದಾರವನ್ನು ಹಿಡಿದು,

ಬಧ್ನಾಮಿ ದಕ್ಷಿಣೆ ಹಸ್ತೇ ನವ ಸೂತ್ರಂ ಶುಭಪ್ರದಂ
ಪುತ್ರಪೌತ್ರಾಭಿವೃದ್ಧಿಂ ಚ ಸೌಭಾಗ್ಯ ದೇಹಿ ಮೇ ರಮೇ

ಈ ಮೇಲಿನ ಮಂತ್ರವನ್ನು ಹೇಳುತ್ತ ಬಲಗೈಗೆ ಕಟ್ಟಿಸಿಕೊಳ್ಳಬೇಕು. ಹಾಗೂ ಬ್ರಾಹ್ಮಣರಿಗೆ ಸ್ವಯಂಪಾಕ ದಕ್ಷಿಣೆಗಳನ್ನು ದಾನ ಕೊಟ್ಟು ವ್ರತ ಕಥೆಯನ್ನು ಕೇಳಬೇಕು. ಮುತ್ತೈದೆಯರಿಗೆ ಅರಿಶಿಣ ಕುಂಕುಮ ಫಲ ತಾಂಬೂಲ ಬಳೆ ರವಿಕೆ ಕಣ ಹೀಗೆ ನಿಮ್ಮ ಶಕ್ತ್ಯಾನುಸಾರ ಕೊಡಬೇಕು. ನಂತರ ಬ್ರಾಹ್ಮಣರಿಗೆ ದಕ್ಷಿಣೆ ಸಹಿತ ಸ್ವಯಂಪಾಕ ದಾನ ಮಾಡಬೇಕು.

ಇನ್ನು ಪುರಾಣಗಳ ಪ್ರಕಾರ ಶ್ರೀಮನ್ನಾರಾಯಣನ ಸ್ಮರಣೆ ಆರಾಧನೆ ಮಾಡದೇ ಕೇವಲ ಲಕ್ಷ್ಮೀ ಆರಾಧನೆ ಮಾಡಬಾರದು. ಹಾಗೆ ಮಾಡಿದಲ್ಲಿ ಲಕ್ಷ್ಮೀದೇವಿಗೆ ಕೋಪ ಬರುತ್ತದೆ. ಆದುದರಿಂದ ಈ ವ್ರತದ ಮಧ್ಯದಲ್ಲಿ ಮಹಾವಿಷ್ಣುವಿನ ಆವಾಹಣೆ ಅಷ್ಟೋತ್ತರ ಪಠನ, ಅರ್ಚನೆ ಸೂಕ್ತ ಎಂಬ ಹಿರಿಯರ ಅಭಿಪ್ರಾಯ ಸಹ ಇದೆ.ನಮ್ಮ ವ್ರತದಲ್ಲಿ ಮಹಾಲಕ್ಷ್ಮೀ ಅಷ್ಟಕ ಪಠಿಸಬೇಕು. ಕುಂಕುಮದ ನೀರು ಮಾಡಿ ಮಹಾಲಕ್ಷ್ಮೀಗೆ ಆರತಿ ಮಾಡುವುದನ್ನು ಮರೆಯದಿರಿ.

ಇನ್ನು, ವ್ರತ ಎಂದರೆ ಅದು ಒಂದು ವಿಧದ ದೇವತಾರಾಧನೆ. ಅಲ್ಲಿ ಎಲ್ಲಕ್ಕಿಂತ ಬಹು ಮುಖ್ಯವಾದುದು ಭಕ್ತಿ. ಅದಿಲ್ಲದೇ ಏನಿದ್ದರೂ ಉಪಯೋಗವಿಲ್ಲ ಹಾಗೂ ಅದಿದ್ದರೆ ಏನಿಲ್ಲದಿದ್ದರೂ ಪರವಾಗಿಲ್ಲ ಎಂದು ಹಲವು ದಾಸವರೇಣ್ಯರು ಹೇಳಿದ್ದುಂಟು. ಆದರೂ ಈ ವರಮಹಾಲಕ್ಷ್ಮೀ ವ್ರತದಲ್ಲಿ ಪಾಲಿಸಬೇಕಾದ ಕೆಲ ಪ್ರಮುಖ ನಿಯಮಗಳತ್ತ ಕುಳಿತುಕೊಳ್ಳುವಾಗ ರೇಷ್ಮೆ ಸೀರೆ ಉಡುವುದು ಶ್ರೇಷ್ಠ. ಇನ್ನು ಆಶಕ್ತರಾದಲ್ಲಿ ಹೊಸ ಸೀರೆ ಉಡುವುದು ಉತ್ತಮ.ಇನ್ನು ಸೀರೆ ಕಡುಗಪ್ಪು ಅಥವಾ ಕಡು ನೀಲಿ ಬಣ್ಣ ಇರಬಾರದು. ಇನ್ನು ಪೂಜೆಗೆ ಕುಳಿತುಕೊಳ್ಳುವಾಗ ಕೂದಲು ಬಿಚ್ಚಿ ಹರಡಿಕೊಳ್ಳಬಾರದು ಜಡೆ ಹಾಕಿರಬೇಕು. ಕೂದಲು ಒದ್ದೆ ಇರಬಾರದು. ಜಡೆಯಲ್ಲಿ ಹೂವು ಇರಬೇಕು. ಹಣೆಯಲ್ಲಿ ಸ್ಟಿಕರ್ ಬದಲು ಪರಿಶುದ್ಧ ಕುಂಕುಮ ಇರಬೇಕು. ಕರ್ಪೂರದ ಬದಲು ತುಪ್ಪದ ಬತ್ತಿ ಬಳಸಿ. ತೋರಣ, ಬಾಳೆಯೆಲೆ ಬಾಳೆಕಂಬಗಳು ಪ್ಲಾಸ್ಟಿಕ್ ಅಲ್ಲದೇ ನಿಜವಾದ ಮಾವಿನ ಸೊಪ್ಪು ಹಾಗೂ ಬಾಳೆ ಎಲೆ ಇಡಬೇಕು. ವಿದ್ಯುತ್

ದೀಪಾಲಂಕಾರದ ಬದಲು ದೀಪದ ಕಂಬಗಳಲ್ಲಿ ನೈಜ ದೀಪವನ್ನು ತುಪ್ಪ ಅಥವಾ ಪರಿಶುದ್ಧ ಎಳ್ಳೆಣ್ಣೆಯಲ್ಲಿ ಹಚ್ಚಬೇಕು. ತುಪ್ಪದ ದೀಪ ಆದರೆ ದೇವರ ಬಲಗಡೆ ಹಾಗೂ ಎಣ್ಣೆಯ ದೀಪ ಆದರೆ ದೇವರ ಎಡಗಡೆ ಇರಿಸಬೇಕು. ಇನ್ನು ಬಾಗಿನ ಹಾಗೂ ಕುಂಕುಮ ತೆಗೆದುಕೊಳ್ಳುವ ಮುತ್ತೈದೆ ಪೂರ್ವ ಅಥವಾ ಪಶ್ಚಿಮಕ್ಕೆ ಮುಖ ಮಾಡಿ ಕುಂತು ಸ್ವೀಕರಿಸಬೇಕು. ಪೂಜಾ ಸಮಯದಲ್ಲಿ ಅಥವಾ ಇಡೀ ದಿನ ಅಪಶಬ್ದ ಅಥವಾ ಅನಾವಶ್ಯಕ ದುರಾಲೋಚನೆಗಳು ನಿಮ್ಮಲ್ಲಿ ಬರದಂತೆ ಎಚ್ಚರವಹಿಸಿ. ನೀವು ಸ್ವಯಂಪಾಕದಲ್ಲಿ ನೀಡುವ ತರಕಾರಿ ಹಾಗೂ ಅಕ್ಕಿ ಬೇಳೆ ಇತ್ಯಾದಿ ಪದಾರ್ಥಗಳು ಉತ್ತಮ ಗುಣಮಟ್ಟ ಇರಬೇಕು ಹಾಗೂ ಪ್ರಮಾಣದಲ್ಲಿಯೂ ಸಹ ನಿಮ್ಮಿಂದ ಸ್ವಯಂಪಾಕ ಪಡೆದವರು ಕನಿಷ್ಠ ಒಂದು ದಿನ ಅಥವಾ ಒಂದು ಹೊತ್ತು ಅಡುಗೆ ಮಾಡಿ ಊಟ ಮಾಡುವಷ್ಟು ಇರಬೇಕು.

ಶ್ರಾವಣ ಮಾಸದಲ್ಲಿ ಶಕ್ತರು ಅವರಿಗೆ ಅನುಕೂಲವಾದ ಮಂಗಳ ಅಥವಾ ಶುಕ್ರವಾರದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿಸಿ ಕಮಲ ಪುಷ್ಪ ಹಾಗೂ ಪಾಯಸ ದ್ರವ್ಯದಲ್ಲಿ ಲಕ್ಷ್ಮೀ ನಾರಾಯಣ ಹೃದಯ ಮಂತ್ರಗಳಿಂದ ಹವನ ಮಾಡಿಸುವುದರಿಂದ ಸಕಲ ಆರ್ಥಿಕ ಬಾಧೆಗಳು ನಿವಾರಣೆಯಾಗಿ ವ್ಯಾಪಾರ ಅಭಿವೃದ್ಧಿ ಆಗಿ ಮನೆಯಲ್ಲಿ ಸಕಲ ಸೌಭಾಗ್ಯ ಸಂಪತ್ತು ಅಭಿವೃದ್ಧಿ ಆಗುತ್ತದೆ ಎಂದು ಪುರಾಣಗಳು ಸಾರುತ್ತವೆ.

**ಮನದೊಳಗಿನ ಮಹಾಲಕ್ಷ್ಮೀ**

ಮಹಾಲಕ್ಷ್ಮೀ ಸೌಭಾಗ್ಯವತಿ, ಸೌಮಂಗಲ್ಯವತಿ, ಸಂಪತ್ಕರಿ, ಶುಭಕರಿ ಎಂತಲೂ ಗುರುತಿಸಲ್ಪಡುತ್ತಾಳೆ. ವಾಡಿಕೆಯಲ್ಲಿ ಮುತ್ತೈದೆಯರು ಮಹಾಲಕ್ಷ್ಮೀ ಸ್ವರೂಪರೇ ಎನ್ನುವ ಭಾವವಿದೆ. ಸೌಭಾಗ್ಯವತಿಯಾಗಿ, ನಿತ್ಯ ಸುಮಂಗಲಿಯಾಗಿ ಕಂಗೊಳಿಸುವ ಮುತ್ತೈದೆಯೊಳಗಿನ ಗುಣಗಳ ಹಿಂದಿನ ಲಕ್ಷ್ಮೀ ತತ್ತ್ವವೇನು? ಒಂದು ನೋಟ.

ಮಹಾಲಕ್ಷ್ಮಿ ಎನ್ನುವುದು ಲೌಕಿಕ ದೃಷ್ಟಿಗೆ ಗೋಚರವಾಗುವ ಸಂಪತ್ತಿನ ರೂಪವೇ ಅಥವಾ ಆಂತರಿಕ ರೂಪವೇ ಅಥವಾ ಸೌಂದರ್ಯದ ಗಣಿಯೇ? ಮಹಾಲಕ್ಷ್ಮೀಯೇ ಸುಲಕ್ಷಣ ಸಂಪನ್ನೆ ಎನ್ನುವಾಗ ಅದರಲ್ಲಿ ಕಾಮ, ಮೋಹ ಅಥವಾ ಉತ್ಪ್ರೇಕ್ಷಿತ ವಾಂಛೆಗಳಿಲ್ಲ. ಬದಲಿಗೆ ಯಾವುದು ಶುಭವೋ, ಯಾವ ವಸ್ತು ಮನಸ್ಸಿಗೆ ಆಹ್ಲಾದಕರವೋ ಅದುವೇ ಲಕ್ಷ್ಮೀ ಸ್ವರೂಪ. ಲಕ್ಷ್ಮೀ ಎನ್ನುವುದು ಶ್ರೇಷ್ಠತೆಯ ಸಂಕೇತ. ಕೆಲವರು ಲಕ್ಷ್ಮೀಯನ್ನು ಸಂಪತ್ತಿಗೆ ಹೋಲಿಸುತ್ತಾರೆ. ಲೌಕಿಕ ದೃಷ್ಟಿಯ ಸಂಪತ್ತು ನಶ್ವರ, ಕ್ಷಣ ಭಂಗುರ ವಸ್ತು. ಆದರೆ ಆಧ್ಯಾತ್ಮಿಕ ದೃಷ್ಟಿಕೋನದ ಸಂಪತ್ತು ಶಾಶ್ವತ. ಹರಿದ್ವರ್ಣದಂತೆ ನಿತ್ಯವೂ ಪ್ರಕಾಶಿಸುತ್ತದೆ. ಪ್ರಕೃತಿಗೂ, ಪುರುಷನಿಗೂ ಶೋಭಾಯಮಾನವಾಗಿರುತ್ತದೆ.

ಸುಲಕ್ಷಣ ಸಂಪನ್ನೆ ಎಂದಾಕ್ಷಣ ಕಣ್ಮುಂದೆ ಸುಳಿಯುವವಳೇ ಮಹಾಲಕ್ಷ್ಮಿ. ಮಹಾಲಕ್ಷ್ಮಿಯ ಪ್ರತಿರೂಪವೇ ಮುತ್ತೈದೆ. ಮುತ್ತೈದೆ ಎಂದರೆ ಮುತ್ತಿನಂತಹ ಐದು ರತ್ನಗಳನ್ನು ಧರಿಸಿದವಳು. ಅವೆಂದರೆ ಹಣೆಗೆ ತಿಲಕ, ಕೈಗಳಿಗೆ ಗಾಜಿನ ಬಳೆ, ಮೂಗಿಗೆ ಮೂಗುತಿ, ಕೊರಳಿಗೆ ಮಾಂಗಲ್ಯ, ಕಾಲ್ಬೆಟ್ಟುಗಳಿಗೆ ಕಾಲುಂಗುರ, ಹೀಗೆ ಐದು ಮುತ್ತುಗಳನ್ನು ಧರಿಸಿದ ಮುತ್ತೈದೆಗೆ ಅರಿಶಿನ ಕುಂಕುಮವೇ ಭೂಷಣ. ಅದುವೇ ಸೌಭಾಗ್ಯದ ಸೂಚಕ. ಮಹಾಲಕ್ಷ್ಮಿಯ ಪ್ರತೀಕ. ಬಹುಶಃ ಆ ಕಾರಣದಿಂದಲೇ ಆಕೆಯನ್ನು ಸಂತಾನಲಕ್ಷ್ಮೀ, ಭಾಗ್ಯಲಕ್ಷ್ಮೀ ಹೀಗೆ ಅನೇಕಾನೇಕ ಉಪಮೆಗಳಿಂದ ವರ್ಣಿಸುವುದು. ಆಭರಣಗಳಿಂದ ಸುಶೋಭಿತಳಾದ ಮುತ್ತೈದೆ ಲೌಕಿಕ ಸೌಂದರ್ಯದ ಪ್ರತೀಕವಲ್ಲ. ಬದಲಿಗೆ ಆಧ್ಯಾತ್ಮಿಕ ಜಾಗೃತಿಯ ಪುತ್ಥಳಿಯಂತೆಯೂ ಕಂಗೊಳಿಸುತ್ತಾಳೆ. ಆಕೆ ಧಾರಣೆ ಮಾಡುವ ಪ್ರತಿಯೊಂದು ಆಭರಣದ ಹಿಂದೆಯೂ ಚಿಕಿತ್ಸಕಾ ಗುಣವಿದೆ, ಆಧ್ಯಾತ್ಮಿಕ ನೋಟದ ಸಿಂಚನವಿದೆ.

**ಮಾಂಗಲ್ಯ ಮಹತ್ವ**

ಮಹಿಳೆ ಧರಿಸುವ ಕರಿಮಣಿ ಸರ ಮತ್ತು ಮಾಂಗಲ್ಯ ಅತ್ಯಂತ ಮುಖ್ಯವಾದ ಆಭರಣ. ಹಿಂದಿನ ಕಾಲದಲ್ಲಿ ಕರಿಮಣಿಯನ್ನು ಜೇಡಿ ಮಣ್ಣಿನಲ್ಲಿ ಮಾಡುತ್ತಿದ್ದರು. ಬದಲಾದ ಕಾಲಘಟ್ಟದಲ್ಲಿ ಅವು ಕಲ್ಲಿನ ಪ್ರತಿರೂಪಗಳಾಗಿವೆ. ಎದೆಯ ಮೇಲ್ಭಾಗದಲ್ಲಿ ಶೋಭಿಸುವ



ಕರಿಮಣಿಯು ಎದೆಯ ಭಾಗದಲ್ಲಿ ಉಂಟಾಗುವ ಉಷ್ಣವನ್ನು ಹೀರಿಕೊಳ್ಳುತ್ತದೆ. ದೇಹದ ಸಮತೋಲನವನ್ನು ಕಾಪಾಡುತ್ತದೆ.

ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಕರಿಮಣಿ ಸರವನ್ನು ಕತ್ತಿನ ಸುತ್ತ ಧರಿಸುವುದರಿಂದ ಕತ್ತಿನ ಹಿಂಭಾಗದಲ್ಲಿರುವ ವಿಶುದ್ಧ ಚಕ್ರದ ಚೈತನ್ಯವು ಹೃದಯ ಭಾಗದ ಅನಾಹತ ಚಕ್ರದತ್ತ ಹರಿದು ಬರುತ್ತದೆ. ಮಾಂಗಲ್ಯಧಾರಣೆಯ ಅಂತರಾರ್ಥವೇ ಹೃದಯ ಜ್ಯೋತಿ ಸದಾ ದರ್ಶನಿಯ ಎನ್ನುವುದಾಗಿದೆ. ಆ ಕಾರಣದಿಂದಲೇ 'ಮಾಂಗಲ್ಯಂ ತಂತು ನಾ ದೇವ ಮಮ ಜೀವನ ಹೇತುನಾಂ...' ಎನ್ನುವ ಮಂತ್ರ ಬಂದಿರುವುದು.

**ಕಾಲುಂಗುರದ ಕ್ರಿಯಾಶೀಲತೆ**

ಕಾಲುಂಗುರವನ್ನು ಧರಿಸುವ ಕಾಲು ಬೆರಳಿಗೂ ಗರ್ಭಕೋಶಕ್ಕೂ ನೇರವಾದ ಸಂಬಂಧವಿದೆ. ಗರ್ಭಧಾರಣೆಯಾದ ಮೇಲೆ ಗರ್ಭಸ್ರಾವವಾಗದಂತೆ ತಡೆಯುತ್ತದೆ ಕಾಲುಂಗರ. ಆ ನರದ ಮೇಲೆ ಬೆಳ್ಳಿಯ ಅಥವಾ ಪಂಚಲೋಹದ ಉಂಗುರವು ಸದಾ ಈ ನಾಡಿಯ ಮಿಡಿತವನ್ನು ಸಮತೋಲನದಲ್ಲಿ ಇರಿಸುತ್ತದೆ. ಕಾಲ್ಗೆಜ್ಜೆ, ಕಾಲುಂಗುರ, ಕಡಗಗಳ ಧಾರಣೆಯಿಂದ ಹಿಮ್ಮಡಿಯ ನೋವು ನಿವಾರಣೆಯಾಗುತ್ತದೆ ಎಂದು ವೈದ್ಯರು ಅಭಿಪ್ರಾಯಿಸುತ್ತಾರೆ. ಕಾಲುಂಗುರ ಧಾರಣೆಯಿಂದ ಬೆರಳುಗಳಲ್ಲಿನ ರಕ್ತ ಸಂಚಾರವು ಸರಾಗವಾಗಿ ನಡೆಯುತ್ತದೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಸೊಂಟಕ್ಕೆ ಡಾಬು ಕಟ್ಟುವ ವಾಡಿಕೆಯಿದೆ. ಅದರಿಂದಾಗಿ ಮಹಿಳೆಯ ಮಾಸಿಕ ಅನಿಯಮಿತ ಸಮಸ್ಯೆ ದೂರಾಗುವುದಲ್ಲದೆ, ಪಚನ ಕ್ರಿಯೆಯೂ ನಿರಾತಂಕವಾಗುತ್ತದೆ. ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಕಂಡಾಗ ಕುಂಡಲಿನಿ ಶಕ್ತಿಯು ಸುಷುಮ್ನಾ ನಾಡಿಗೆ ಸಂಬಂಧವಿರುವ ಕಾರಣ ಕಾಲುಂಗುರ ಧರಿಸಿದಾಕೆಯಲ್ಲ ಚೈತನ್ಯವು ಸಮರ್ಪಕವಾಗಿ ಹರಿಯುತ್ತದೆ. ಕಾಲ್ಗೆಜ್ಜೆ, ಕಾಲಂದಿಗೆ ಧಾರಣೆ ಮಾಡಿದಾಗ ಅದು ಕಾಲಿನ ಮಣಿಕಟ್ಟಿನಲ್ಲಿರುವ ನರಗಳನ್ನು ಒತ್ತುತ್ತದೆ. ಅದರ ಕಾರಣ ಬೆನ್ನುಹುರಿಯ ನರಗಳು ಉತ್ತೇಜನಗೊಂಡು ಆಯಾಸ ಪರಿಹಾರವಾಗಿ ಮನಸ್ಸಿನಲ್ಲಿ ನವೋಲ್ಲಾಸ ಉಂಟಾಗುತ್ತದೆ. ಕಾಲ್ಗೆಜ್ಜೆಗಳಿಂದಾಗಿ ಕಾಲಿನ ಮಣಿಕಟ್ಟು ಸಶಕ್ತವಾಗಿರುವಂತೆ ನೆರವಾಗುತ್ತದೆ.

**ಹಸ್ತಾಲಂಕಾರದ ಹಿತ**

ಹಬ್ಬ ಹರಿದಿನಗಳಲ್ಲಿ ಅದರಲ್ಲೂ ಹಬ್ಬದಂದು ಮಹಿಳೆಯರು ಆಭರಣಗಳನ್ನು ಧರಿಸಿ ಸುಶೋಭಿತರಾಗಿಯೂ, ಅರಿಶಿನ, ಕುಂಕುಮಗಳಿಂದ ಸುಲಕ್ಷಣ ಸಂಪನ್ನರಾಗಿಯೂ ಕಾಣುತ್ತಾರೆ. ಅದರಿಂದಾಗಿ ಆತ್ಮಶಕ್ತಿ ಜಾಗೃತಗೊಳ್ಳುತ್ತದೆ. ಬಂಗಾರದ ಉಂಗುರ ದೇಹದ ಉಷ್ಣತೆಯನ್ನು ಸಮಸ್ಥಿತಿಯಲ್ಲಿಸುತ್ತದೆ. ತರ್ಜನಿ ಬೆರಳಿನಲ್ಲಿ ಉಂಗುರ ಧಾರಣೆ ಮಾಡುವುದರಿಂದ ಮನಸ್ಸಿನೊಳಗೆ ಸ್ಥಿರಭಾವವೂ ಉಂಟಾಗುತ್ತದೆ ಎಂದು ಹೇಳುತ್ತಾರೆ. ಆಯುರ್ವೇದದ ದೃಷ್ಟಿಯಲ್ಲಿ ನೋಡಿದಾಗ ತರ್ಜನಿ ಬೆರಳಿನ ನರಕ್ಕೂ, ನಮ್ಮ ಮೆದುಳಿನ ನರಕ್ಕೂ ನೇರವಾದ ಸಂಬಂಧವಿದೆ. ಮನದ ಸ್ಥಿರತೆ ಕಾಪಾಡಲು ಈ ಭಾಗದ ನರದ ಮೇಲೆ ಮೃದುವಾದ ಒತ್ತಡ ಹೇರುವುದು ಅತ್ಯವಶ್ಯಕವಾಗಿದೆ. ಗಾಜಿನ ಬಳೆ ಧಾರಣೆಯು ಮಣಿಕಟ್ಟಿನ ಮೇಲೆ ಒತ್ತಡವನ್ನು ಬೀರುತ್ತವೆ. ಮಾನಸಿಕ ಸಮತೋಲನಕ್ಕೆ ಅವೂ ಕಾರಣವಾಗುತ್ತವೆ.

**ಮೂಗುತಿ ಧಾರಣೆ**

ಮೂಗಿಗೆ ತೊಡುವ ಆಭರಣದ ಹಿಂದೊಂದು ಆಧ್ಯಾತ್ಮಿಕ ವಿಕಸನವಿದೆ. ಮೂಗಿನ ಹೊಳ್ಳೆಯ ಬಲ ಬದಿಗೆ ಹೊಂದಿಕೊಂಡಂತೆ ಪಿಂಗಳ ನಾಡಿಯಿದ್ದರೆ, ಎಡ ಬದಿಯಲ್ಲಿ ಇಡಾ ನಾಡಿಯಿದೆ, ಎರಡು ನಾಡಿಗಳ ಸಂಗಮವಾದ ಬಲಾಕು ಸುಷುಮ್ನಾ ನಾಡಿಯ ಕೇಂದ್ರವಾಗಿದೆ. ಇವುಗಳ ಸಂಗಮವೇ ಆಧ್ಯಾತ್ಮಿಕ ಶಕ್ತಿಯ ವಿಕಾಸ. ಗೃಹಿಣಿಯಾದವಳಿಗೆ ಅನೇಕ ರೀತಿಯ ಒತ್ತಡ. ಸಾಂಸಾರಿಕ ಜೀವನದ ಜಂಜಾಟದಲ್ಲಿ ನಲುಗುವ ಆಕೆಯ ದೇಹದ ಉಷ್ಣತೆ ತೀವ್ರವಾಗಿ ಹೆಚ್ಚುತ್ತದೆ. ಮೂಗುತಿ ಧಾರಣೆಯಿಂದ ಆಕೆಯ ಶಾರೀರಿಕ ಉಷ್ಣತೆ ಸಮತೋಲನದಲ್ಲಿರುತ್ತದೆ. ಮುಖ್ಯವಾಗಿ ಗಮನ ಮೂಗುತಿಯ ಮೇಲೆ ಹರಿಯುವುದರಿಂದ ಮನೋವಿಕಾರಗಳು ಶಮನವಾಗುತ್ತವೆ. ಮೂಗುತಿಯ ಧಾರಣೆಯಿಂದಾಗಿ ಮೂಗಿನ ಮೇಲೆ ಆಕ್ಯುಪೆಷರ್ ಉಂಟಾಗುತ್ತದೆ. ಉಸಿರಾಟದ ಮಾರ್ಗದ ಎರಡು, ತೊಡರುಗಳ ನಿವಾರಣೆಗೆ

ಸಹಾಯಕವಾಗುತ್ತದೆ. ಚಂದ್ರನಾಡಿಯು ಮನಸ್ಸಿನ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ. ಬಹುಶಃ ಇವೆಲ್ಲಾ ಕಾರಣಗಳಿಂದಲೇ 'ನಾಸಿಕಾಂಭರಣಂ ದಿವ್ಯಂ ಕಾಂಚನೇವ ಸಮನ್ವಿತಂ' ಎನ್ನುವ ಮಾತು ಬಂದಿರಬಹುದು.

**ಸಿಂಧೂರ ತಿಲಕ**

ಕುಂಕುಮವಿರುವುದೇ ಹಣೆಗಾಗಿ.. ಹಾಡು ನೀವು ಕೇಳಿರಬಹುದು. ಸೌಭಾಗ್ಯವತಿ ಮಹಾಲಕ್ಷ್ಮಿಯ ಸಂಕೇತವೇ ಹಣೆಯಲ್ಲಿ ಶೋಭಾಯಮಾನವಾದ ಕುಂಕುಮ. ಮಹಿಳೆಯರು ತಿಲಕವನ್ನು ಭ್ರೂಮಧ್ಯೆ ಧರಿಸುತ್ತಾರೆ. ಹಣೆಯ ಮೇಲಿನ ಕುಂಕುಮದ ಬೊಟ್ಟು ಅವರ ಮೇಲೆ ನೇರ ದೃಷ್ಟಿ ಬೀಳುವುದನ್ನು ತಪ್ಪಿಸುತ್ತದೆ. ತಿಲಕಧಾರಣೆಯಿಂದಾಗಿ ಸೌಂದರ್ಯವು ವರ್ಧಿಸುತ್ತದೆ. ತಿಲಕ ಧಾರಣೆ ಮಾಡಿಕೊಳ್ಳುವಾಗ ಭ್ರೂಮಧ್ಯದಲ್ಲಿರುವ ನಾಡಿಯ ಮೇಲೆ ಒತ್ತಡ ಉಂಟಾಗುತ್ತದೆ. ಯೋಗ ಸಿದ್ಧಾಂತದ ಪ್ರಕಾರ ಈ ಭಾಗದಲ್ಲಿ ಅಜ್ಞಾಚಕ್ರವಿರುತ್ತದೆ. ಹೀಗೆ ಆಜ್ಞಾ ಚಕ್ರವನ್ನು ಪ್ರಚೋದಿಸುವ ಮೂಲಕ ಬುದ್ಧಿ ಮತ್ತು ಸ್ಮರಣ ಶಕ್ತಿ ಕ್ರಿಯಾಶೀಲವಾಗುತ್ತದೆ. ಒಟ್ಟಾರೆ ಸರ್ವಾಭರಣ ಭೂಷಿತೆಯಾಗಿ ಮುತ್ತೈದೆಯಂತೆ ಕಂಗೊಳಿಸುವ ಗೃಹಿಣಿಯೇ ಗೃಹಲಕ್ಷ್ಮಿ. ಆಕೆಯೇ ಮನೆ, ಮನ ಬೆಳಗುವ ಮಹಾಲಕ್ಷ್ಮಿಯಾಗಿದ್ದಾಳೆ.

**ಸಂಪತ್ಕರಿಯ ಕೃಪೆಗೊಂದು ಸೂತ್ರ**

ಮಹಾಲಕ್ಷ್ಮಿ ಸಂಪತ್ ಪ್ರದಾಯಿನಿ ಎಂದೇ ಹೆಸರುವಾಸಿಯಾಗಿದ್ದಾಳೆ. ಲಕ್ಷ್ಮಿದೇವಿಯ ಆರಾಧನೆ ಮಾಡುವುದರಿಂದ ಸುಖ, ಸಂಪತ್ತು, ಭಾಗ್ಯ ಲಭಿಸುತ್ತದೆ ಎನ್ನುವ ನಂಬಿಕೆಯಿದೆ. ಆದರೆ ಲಕ್ಷ್ಮಿಯ ಕೃಪೆಗೆ ಪಾತ್ರರಾಗುವ ಬಗೆ ಹೇಗೆ? ಕುಬೇರ ಐಶ್ವರ್ಯಾಭಿಮಾನಿ ದೇವತೆ. ಕುಬೇರನನ್ನು ಸಂತುಷ್ಟಿಗೊಳಿಸುವುದರಿಂದ ಮಹಾಲಕ್ಷ್ಮಿಯು ಸುಪ್ರೀತಳಾಗುತ್ತಾಳೆ ಎನ್ನುವ ಭಾವನೆ ಅನೂಚಾನವಾಗಿ ಬಂದಿದೆ. ಬಹುಶಃ ಆ ಕಾರಣದಿಂದಲೇ ಹಬ್ಬದ ದಿನದಂದು ಕುಬೇರ ದೀಪವನ್ನು ಬೆಳಗುತ್ತಾರೆ. ಸ್ಥಳವನ್ನು ಆದಷ್ಟು ಶುಚಿಯಾಗಿ, ಶುಭ್ರವಾಗಿ ಇಡುತ್ತಾರೆ. ಸಾಮಾನ್ಯವಾಗಿ ಕಲಶದಲ್ಲಿ ಲಕ್ಷ್ಮಿಯನ್ನು ಆವಾಹಣೆ ಮಾಡುತ್ತಾರೆ. ಕಲಶಕ್ಕೆ ಶೋಭಾಯಮಾನವಾದುದೇ ತೆಂಗಿನಕಾಯಿ. ತೆಂಗಿನಕಾಯಿಗೆ ನಾರಿಕೇಳ, ಶ್ರೀಫಲ ಎಂತಲೂ ಕರೆಯುತ್ತಾರೆ. ಆ ಕಾರಣ ಮನೆಗೆ ಬರುವ ಮಹಾಲಕ್ಷ್ಮಿಯನ್ನು ಶ್ರೀಫಲದಿಂದ ಶೋಭಿತವಾದ ಕಳಸದಿಂದಲೇ ಆಹ್ವಾನಿಸಿ ಪೂಜಿಸಬೇಕು. ಮಹಾಲಕ್ಷ್ಮಿ ಕ್ಷೀರಸಾಗರದಲ್ಲಿ ಹುಟ್ಟಿ ಬಂದವಳಾದ್ದರಿಂದ ಆಕೆಗೆ ಹಾಲಿನಿಂದ ಅಭಿಷೇಕ ಮಾಡಿ, ಮಲ್ಲಿಗೆಯಿಂದ ಪೂಜಿಸುವ ವಾಡಿಕೆಯಿದೆ. ಶ್ರೀ ಚಕ್ರಾಂಕಿತಳಾದ ಲಕ್ಷ್ಮೀ ಪೂಜೆಯ ನಂತರ ಶಂಖವನ್ನು ಶುಭ ಸೂಚಕವಾಗಿ ಊದುವುದು ಶ್ರೇಷ್ಠವೆನ್ನುವ ಭಾವನೆಯಿದೆ.

ದೇವಿಯೊಬ್ಬಳು ದೇಗುಲಗಳು ಹಲವು

ಕೊಲ್ಲಾಪುರ ಮಹಾಲಕ್ಷ್ಮೀ ದೇವಾಲಯ

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನ, ದೇಶದ 52 ಶಕ್ತಿಪೀಠಗಳಲ್ಲಿ ಒಂದಾದ್ದರಿಂದ ಅತ್ಯಂತ ಪ್ರಸಿದ್ಧಿ ಮಂದಿರ. ತನ್ನ ಪತ್ನಿಯ ದೇವಸ್ಥಾನ ಇರುವ ಕಾರಣಕ್ಕೆ ಮಹಾವಿಷ್ಣುವಿಗೆ ಈ ಪ್ರದೇಶದ ಮೇಲೆ ವಿಶೇಷ ಅಕ್ಕರೆ ಎಂಬ ನಂಬಿಕೆ ಇದೆ. ಕರ್ನಾಟಕದ ಚಾಲುಕ್ಯರಿಂದ ನಿರ್ಮಾಣವಾದ ಈ ದೇವಸ್ಥಾನಕ್ಕೆ ಪ್ರತಿ ವರ್ಷ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

**ಗೊರವನಹಳ್ಳಿ ಲಕ್ಷ್ಮೀ ದೇವಸ್ಥಾನ**

ಕರ್ನಾಟಕದ ಮಟ್ಟಿಗೆ ಲಕ್ಷ್ಮೀ ಎಂದೊಡನೆ ಪ್ರಮುಖವಾಗಿ ಗೊರವನಹಳ್ಳಿ ದೇವಸ್ಥಾನ ನೆನಪಿಗೆ ಬರುತ್ತದೆ. ಊರ ಹೊರವಲಯದಲ್ಲಿ ಸೊರಗಿ ನಿಂತಿದ್ದ ದೇವಾಲಯವನ್ನು ಕಮಲಮ್ಮ ಎಂಬುವರು ಅಭಿವೃದ್ಧಿಪಡಿಸಿದರು. ಮನೆಯ ಸಮಸ್ಯೆಗಳು, ವಿವಾಹವಾಗದಿರುವಿಕೆ ಸೇರಿ ಅನೇಕ ಕಾರಣಗಳಿಗೆ ಗೊರವನಹಳ್ಳಿ ಲಕ್ಷ್ಮೀ ಕೃಪಾ ಕಟಾಕ್ಷವಿದ್ದರೆ ಬಗೆಹರಿಯುತ್ತದೆ ಎಂಬ ನಂಬಿಕೆ ಇದೆ. ದೇವಸ್ಥಾನದ ಸಲುವಾಗಿ ಸ್ವತಃ ಕಮಲಮ್ಮನವರೂ ಭಕ್ತರಿಗೆ ದೇವರ ರೂಪವಾಗಿಯೇ ಕಾಣುತ್ತಿದ್ದರು.

### ಹಾಸನ ಲಕ್ಷ್ಮೀದೇವಿ ದೇವಸ್ಥಾನ

ಭಕ್ತರ ಸಂಖ್ಯೆ ಲೆಕ್ಕದಲ್ಲಿ ಹೆಚ್ಚಲ್ಲದಿದ್ದರೂ ಪ್ರಾಚೀನತೆಯ ದೃಷ್ಟಿಯಿಂದ ಹಾಸನ ಜಿಲ್ಲೆ ದೊಡ್ಡಗದವಳ್ಳಿಯ ಲಕ್ಷ್ಮೀದೇವಿ ದೇವಸ್ಥಾನ ಮುಖ್ಯಸ್ಥಾನ ಪಡೆಯುತ್ತದೆ. ಸಾಮಾನ್ಯವಾಗಿ ಶಿವನ ದೇವಸ್ಥಾನ ನಿರ್ಮಾಣಕ್ಕೆ ಹೆಸರುವಾಸಿಗಳಾದ ಹೊಯ್ಸಳ ರಾಜರ ಕಾಲದಲ್ಲಿ ಲಕ್ಷ್ಮೀ ದೇವಸ್ಥಾನ ನಿರ್ಮಾಣವಾಗಿದೆ. ಹೊಯ್ಸಳ ರಾಜರ ಅನುಮತಿ ಮೇರೆಗೆ ಮಹಾರಾಷ್ಟ್ರದ ವ್ಯಾಪಾರಿ ಕುಲ್ಲಣ ರಾವತ್ ನಿರ್ಮಿಸಿದ ದೇಗುಲವಿದು. ಉಳಿದ ಹೊಯ್ಸಳ ದೇವಾಲಯಕ್ಕಿಂತ ಸ್ವಲ್ಪ ಭಿನ್ನವಾಗಿರುವ ದೇವಾಲಯ ನಾಲ್ಕು ಶಿಖರ ಹೊಂದಿದೆ.

### ವೆಲ್ಲೂರು ಶ್ರೀಪುರಂ ಗೋಲ್ಡನ್ ಟೆಂಪಲ್

ತಮಿಳುನಾಡಿನ ವೆಲ್ಲೂರಿನಲ್ಲಿರುವ ಶ್ರೀಪುರಂನ ಗೋಲ್ಡನ್ ಟೆಂಪಲ್ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುತ್ತದೆ. ದೇವಸ್ಥಾನ ಹಾಗೂ ಗೋಪುರ ಸಂಪೂರ್ಣ ಚಿನ್ನದಿಂದ ಆಲಂಕೃತವಾಗಿ ದೇಶದಲ್ಲೆ ಲಕ್ಷ್ಮೀ ದೇವಾಲಯಗಳ ಪೈಕಿ ವಿಶಿಷ್ಟ ಸ್ಥಾನ ಪಡೆದಿದೆ. ಲಕ್ಷ್ಮೀ ಶ್ರೀಚಕ್ರವನ್ನೇ ಹೋಲುವ ಪ್ರದಕ್ಷಿಣೆ ದಾರಿಯನ್ನು ಹೊಂದಿದೆ. ಮಲೈಕೊಟಿ ಪರ್ವತದಲ್ಲಿರುವ ದೇವಸ್ಥಾನ, ದೇಶದ ಬೃಹತ್ ದೇವಸ್ಥಾನಗಳ ಪೈಕಿ ಒಂದು.

### ದೆಹಲಿ ಲಕ್ಷ್ಮೀ ನಾರಾಯಣ ಮಂದಿರ

ಉದ್ಯಮಿ ಬಿ.ಆರ್.ಬಿರ್ಲಾ ಹಾಗೂ ವಿಜಯ್ ತ್ಯಾಗಿ ದೇಶದ ಏಕತೆಗಾಗಿ ವಿವಿಧೆಡೆ ನಿರ್ಮಿಸಿದ ಬಿರ್ಲಾ ಟೆಂಪಲ್‌ಗಳ ಪೈಕಿ ದೆಹಲಿಯಲ್ಲಿರುವ 'ಲಕ್ಷ್ಮೀ ನಾರಾಯಣ ದೇವಸ್ಥಾನ'ವೂ ಒಂದು. ಮಹಾತ್ಮ ಗಾಂಧೀಜಿ ಅವರಿಂದ ಉದ್ಘಾಟನೆಗೊಂಡ ಈ ದೇವಸ್ಥಾನ, ದೆಹಲಿಯ ಪ್ರಮುಖ ಪ್ರವಾಸಿ ತಾಣಗಳಲ್ಲೊಂದು. ದೀಪಾವಳಿ ಹಾಗೂ ಕೃಷ್ಣಾಷ್ಟಮಿ ಸಮಯದಲ್ಲಿ ಹೆಚ್ಚಿನ ಭಕ್ತರು ಆಗಮಿಸುತ್ತಾರೆ. ಗಣೇಶ, ಸರಸ್ವತಿ, ಹನುಮಂತ, ದುರ್ಗೆ ಜತೆಗೆ ಬುದ್ಧ ದೇವಾಲಯಗಳು ಇಲ್ಲಿವೆ.


### ಚೆನ್ನೈ ಅಷ್ಟಲಕ್ಷ್ಮೀ ದೇವಸ್ಥಾನ

ಚೆನ್ನೈನಲ್ಲಿರುವ ಅಷ್ಟಲಕ್ಷ್ಮೀ ದೇವಸ್ಥಾನದಲ್ಲಿ 8 ಬಗೆಯ ಲಕ್ಷ್ಮೀ ರೂಪಗಳನ್ನು ಒಟ್ಟಿಗೆ ನೋಡುವ ಅವಕಾಶ ಲಭಿಸುತ್ತದೆ. ಪ್ರತಿ ರೂಪಕ್ಕೂ ಪ್ರತ್ಯೇಕ ದೇವಸ್ಥಾನ ಹೊಂದುವ ಮೂಲಕ ಲಕ್ಷ್ಮೀ ದೇವಸ್ಥಾನಗಳ ಸಮುಚ್ಚಯವಾಗಿ ನಿರ್ಮಾಣವಾಗಿದೆ. ಈಲಿಯಟ್ ಬೀಚ್ ಸಮೀಪದಲ್ಲಿರುವ ದೇವಸ್ಥಾನದಲ್ಲಿ ವಿಷ್ಣುವಿನ ದೇಗುಲವೂ ಇದೆ.

### ಮುಂಬೈ ಮಹಾಲಕ್ಷ್ಮೀ ದೇವಸ್ಥಾನ

ಮುಂಬೈನಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನ, ವಾಣಿಜ್ಯ ನಗರಿಯ ಪ್ರಮುಖ ಮಂದಿರಗಳಲ್ಲೊಂದು. ಮಂದಿರ ನಿರ್ಮಾಣಕ್ಕೆ ಹಿನ್ನೆಲೆಯಾಗಿ ರೋಚಕ ಕಥೆಯೊಂದಿದೆ. ಮುಂಬೈ ಹಾಗೂ ಸಮೀಪದ ದ್ವೀಪಗಳನ್ನು ಸಂಪರ್ಕಿಸಲು ಹಾರ್ನ್‌ಬೀ ವೆಲ್ಲಾರ್ಡ್ ಸೇತುವೆ ನಿರ್ಮಾಣ ಕಾರ್ಯ ಸಾಗಿತ್ತು. ನಿರ್ಮಾಣ ಹಂತದಲ್ಲಿದ್ದ ಸೇತುವೆ ಎರಡು ಬಾರಿ ನೆಲಕಚ್ಚಿತ್ತು. ಒಂದು ದಿನ ಇಂಜಿನಿಯರ್ ಕನಸಿನಲ್ಲಿ ಲಕ್ಷ್ಮೀದೇವಿಯ ಪ್ರತ್ಯಕ್ಷಳಾಗಿದ್ದಳು. ನಂತರ ಸೇತುವೆ ಪ್ರದೇಶವನ್ನು ಹುಡುಕಿದಾಗ ಲಕ್ಷ್ಮೀ ವಿಗ್ರಹ ಪತ್ತೆಯಾತ್ತು. ವಿಗ್ರಹವನ್ನು ಸ್ಥಾಪಿಸಿ ದೇವಸ್ಥಾನ ನಿರ್ಮಾಣ ಮಾಡಲಾಯಿತು. ಅಚ್ಚರಿಯ ಬೆಳವಣಿಗೆಯಲ್ಲಿ ವೆಲ್ಲಾರ್ಡ್ ಸೇತುವೆ ಯೋಜನೆ ಯಶಸ್ವಿಯಾಗಿ ಮುಕ್ತಾಯ ಕಂಡಿತ್ತು. ॐ

# ಭಾರತದ ಸ್ವಾತಂತ್ರ್ಯ ದಿನಾಚರಣೆ



ಭಾರತ ದೇಶ 1947 ಆಗಸ್ಟ್ 15 ರಂದು ಸ್ವತಂತ್ರವಾಯಿತು. ಪ್ರತಿ ವರ್ಷ ಭಾರತ ದಾದ್ಯಂತ ಈ ದಿನವನ್ನು ಸ್ವಾತಂತ್ರ್ಯ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಈ ದಿನ ಇಡೀ ದೇಶದಲ್ಲಿ ರಾಷ್ಟ್ರೀಯ ರಜಾದಿನವನ್ನಾಗಿ ಆಚರಿಸಲಾಗುತ್ತದೆ. ದೇಶದ ಹಲವೆಡೆ ತ್ರಿವರ್ಣ ಧ್ವಜವನ್ನು ಹಾರಿಸಿ ಸಿಹಿ ಹಂಚಲಾಗುತ್ತದೆ. ಈ ಆಚರಣೆಯ ಪ್ರಮುಖ ಸಮಾರಂಭ ದೆಹಲಿಯ ಕೆಂಪು ಕೋಟೆಯಲ್ಲಿ ನಡೆಯತ್ತದೆ. ಈ ಸಮಾರಂಭದಲ್ಲಿ, ಭಾರತದ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಧ್ವಜವನ್ನು ಹಾರಿಸಿ ಭಾರತದ ರಾಷ್ಟ್ರಗೀತೆ "ಜನ ಗಣ ಮನ"ವನ್ನು ಹಾಡಿ ನಂತರ ರಾಷ್ಟವನ್ನು ಉದ್ದೇಶಿಸಿ ಭಾಷಣ ಮಾಡುತ್ತಾರೆ. ಈ ಭಾಷಣದಲ್ಲಿ ದೇಶದ ಸಾಧನೆ, ದೇಶದ ಮುಂದಿರುವ ಪ್ರಮುಖ ಸವಾಲುಗಳ ಬಗ್ಗೆ ಮಾತನಾಡಿ, ಕೆಲವು ಪ್ರಗತಿ ಯೋಜನೆಗಳನ್ನು ಪ್ರಕಟಿಸಲಾಗುತ್ತದೆ. ಈ ದಿನದಂದು ದೇಶದ ಸ್ವಾತಂತ್ರ್ಯಕ್ಕೆ ಮಡಿದ ನಾಯಕರನ್ನು ಸ್ಮರಿಸಲಾಗುತ್ತದೆ.

**ಇತಿಹಾಸ**

ಯುರೋಪಿಯನ್ ವ್ಯಾಪಾರಿಗಳು 17 ನೇ ಶತಮಾನದ ಅಂತ್ಯದ ವೇಳೆಗೆ ಭಾರತೀಯ ಉಪಖಂಡದಲ್ಲಿ ಹೊರಠಾಣೆಗಳನ್ನು ಸ್ಥಾಪಿಸಿದ್ದರು. ಅಗಾಧವಾದ ಮಿಲಿಟರಿ ಶಕ್ತಿಯ ಮೂಲಕ, ಈಸ್ಟ್ ಇಂಡಿಯಾ ಕಂಪನಿಯು ಸ್ಥಳೀಯ ಸಾಮ್ರಾಜ್ಯಗಳನ್ನು ಹೋರಾಡಿ ಸ್ವಾಧೀನಪಡಿಸಿಕೊಂಡಿತು. 18 ನೇ ಶತಮಾನದ ವೇಳೆಗೆ ತಮ್ಮನ್ನು ಪ್ರಬಲ ಶಕ್ತಿಯಾಗಿ ಬೆಳೆಯಿತು . 1857 ರ ಭಾರತೀಯ ದಂಗೆಯ ನಂತರ, 1858 ರ ಭಾರತ ಸರ್ಕಾರದ ಕಾಯಿದೆಯು ಬ್ರಿಟಿಷ್ ಕ್ರೌನ್ ಭಾರತದ ನೇರ ನಿಯಂತ್ರಣವನ್ನು ವಹಿಸಿಕೊಳ್ಳಲು ಕಾರಣವಾಯಿತು. ನಂತರದ ದಶಕಗಳಲ್ಲಿ, ನಾಗರಿಕ ಸಮಾಜವು ಭಾರತದಾದ್ಯಂತ ಕ್ರಮೇಣವಾಗಿ ಹೊರಹೊಮ್ಮಿತು, ಅದರಲ್ಲೂ ಮುಖ್ಯವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು 1885 ರಲ್ಲಿ ರೂಪುಗೊಂಡಿತು.

123 ಮೊದಲನೆಯ ಮಹಾಯುದ್ಧದ ನಂತರದ ಅವಧಿಯು ವಸಾಹತುಶಾಹಿ ಸುಧಾರಣೆಗಳಾದ ಮಾಂಟಾಗು–ಚೆಲ್ಮ್ಸ್‌ಫೋರ್ಡ್ ಸುಧಾರಣೆಗಳಿಂದ ಗುರುತಿಸಲ್ಪಟ್ಟಿತು, ಆದರೆ ಇದು ಜನಪ್ರಿಯವಲ್ಲದ ರೌಲಟ್ ಕಾಯಿದೆಯ ಜಾರಿಗೆ ಮತ್ತು ಭಾರತೀಯ ಕಾರ್ಯಕರ್ತರಿಂದ ಸ್ವ–ಆಡಳಿತಕ್ಕಾಗಿ ಕರೆ ನೀಡಿತು. ಈ ಅವಧಿಯ ಅಸಮಾಧಾನವು ಮೋಹನ್ ದಾಸ್ ಕರಮಚಂದ್ ಗಾಂಧಿಯವರ ನೇತೃತ್ವದಲ್ಲಿ ಅಸಹಕಾರ ಮತ್ತು ನಾಗರಿಕ ಅಸಹಕಾರದ ರಾಷ್ಟವ್ಯಾಪಿ ಅಹಿಂಸಾತ್ಮಕ ಚಳುವಳಿಗಳಾಗಿ ಹರಳುಗಟ್ಟಿತು.

1930 ರ ದಶಕದಲ್ಲಿ, ಸುಧಾರಣೆಯನ್ನು ಕ್ರಮೇಣ ಬ್ರಿಟಿಷರು ಶಾಸನಬದ್ಧಗೊಳಿಸಿದರು; ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತು. 195–197 ಮುಂದಿನ ದಶಕವು ರಾಜಕೀಯ ಪ್ರಕ್ಷುಬ್ಧತೆಯಿಂದ

ಸುತ್ತುವರಿದಿತ್ತು: ಎರಡನೆಯ ಮಹಾಯುದ್ಧದಲ್ಲಿ ಭಾರತೀಯ ಭಾಗವಹಿಸುವಿಕೆ, ಅಸಹಕಾರಕ್ಕಾಗಿ ಕಾಂಗ್ರೆಸ್‌ನ ಅಂತಿಮ ತಳ್ಳುವಿಕೆ ಮತ್ತು ಅಖಿಲ ಭಾರತ ಮುಸ್ಲಿಂ ಲೀಗ್ ನೇತೃತ್ವದ ಮುಸ್ಲಿಂ ರಾಷ್ಟ್ರೀಯತೆಯ ಉನ್ನತಿ, ಹೆಚ್ಚುತ್ತಿರುವ ರಾಜಕೀಯ ಉದ್ವಿಗ್ನತೆಯನ್ನು 1947 ರಲ್ಲಿ ಸ್ವಾತಂತ್ರ್ಯದ ಮೂಲಕ ಮುಚ್ಚಲಾಯಿತು. ವಸಾಹತುಶಾಹಿ ಭಾರತವನ್ನು ಭಾರತ ಮತ್ತು ಪಾಕಿಸ್ತಾನಗಳಾಗಿ ರಕ್ತಸಿಕ್ತ ವಿಭಜನೆಯಿಂದ ಹದಗೊಂಡು ಹತೋಟಿಗೆ ಬಂತು.

1929 ರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ, ಪೂರ್ಣ ಸ್ವರಾಜ್ ಘೋಷಣೆ ಅಥವಾ "ಭಾರತದ ಸ್ವಾತಂತ್ರ್ಯದ ಘೋಷಣೆ"ಯನ್ನು ಘೋಷಿಸಲಾಯಿತು. ಭಾರತವು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವವರೆಗೆ ನಾಗರಿಕ ಅಸಹಕಾರಕ್ಕೆ ತಮ್ಮನ್ನು ತಾವು ಪ್ರತಿಜ್ಞೆ ಮಾಡಲು ಮತ್ತು ಕಾಲಕಾಲಕ್ಕೆ ನೀಡಿದ ಕಾಂಗ್ರೆಸ್ ಸೂಚನೆಗಳನ್ನು ಪಾಲಿಸಲು ಕಾಂಗ್ರೆಸ್ ಜನರಿಗೆ ಕರೆ ನೀಡಿತು. ಅಂತಹ ಸ್ವಾತಂತ್ರ್ಯ ದಿನಾಚರಣೆಯನ್ನು ಭಾರತೀಯ ನಾಗರಿಕರಲ್ಲಿ ರಾಷ್ಟ್ರೀಯತೆಯ ಉತ್ಸಾಹವನ್ನು ಹುಟ್ಟುಹಾಕಲು ಮತ್ತು ಸ್ವಾತಂತ್ರ್ಯ ನೀಡುವುದನ್ನು ಪರಿಗಣಿಸಲು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಲು ಕಲ್ಪಿಸಲಾಗಿತ್ತು.

ಕಾಂಗ್ರೆಸ್ 1930 ಮತ್ತು 1946 ರ ನಡುವೆ 26 ಜನವರಿಯನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಿತು. ಆಚರಣೆಯು ಸಭೆಗಳಿಂದ ಗುರುತಿಸಲ್ಪಟ್ಟು ಅಲ್ಲಿ ಹಾಜರಾದವರು "ಸ್ವಾತಂತ್ರ್ಯದ ಪ್ರತಿಜ್ಞೆಯನ್ನು" ತೆಗೆದುಕೊಂಡರು. ಜವಾಹರಲಾಲ್ ನೆಹರು ತಮ್ಮ ಆತ್ಮಚರಿತ್ರೆಯಲ್ಲಿ ಅಂತಹ ಸಭೆಗಳು ಶಾಂತಿಯುತ, ಗಂಭೀರ "ಯಾವುದೇ ಭಾಷಣಗಳು ಅಥವಾ ಉಪದೇಶವಿಲ್ಲದವು" ಎಂದು ವಿವರಿಸಿದ್ದಾರೆ. ಸಭೆಗಳ ಹೊರತಾಗಿ, ಕೆಲವು ರಚನಾತ್ಮಕ ಕೆಲಸಗಳನ್ನು ಮಾಡುವುದರಲ್ಲಿ, ಅಥವಾ 'ಅಸ್ಪೃಶ್ಯರ' ಸೇವೆ, ಅಥವಾ ಹಿಂದೂಗಳು ಮತ್ತು ಮುಸಲ್ಮಾನರ ಪುನರ್ಮಿಲನ, ನಿಷೇಧದ ಕೆಲಸ, ಇವೆಲ್ಲವನ್ನೂ ಒಟ್ಟಾಗಿ ಮಾಡುವುದು" ಎಂದು ಗಾಂಧಿ ಊಹಿಸಿದರು. 1947 ರಲ್ಲಿ ನಿಜವಾದ ಸ್ವಾತಂತ್ರ್ಯದ ನಂತರ, ಭಾರತದ ಸಂವಿಧಾನವು 26 ಜನವರಿ 1950 ರಿಂದ ಜಾರಿಗೆ ಬಂದಿತು; ಅಂದಿನಿಂದ ಜನವರಿ 26 ಅನ್ನು ಗಣರಾಜ್ಯ ದಿನವನ್ನಾಗಿ ಆಚರಿಸಲಾಗುತ್ತದೆ.

**ತಕ್ಷಣದ ಹಿನ್ನೆಲೆ**

1946 ರಲ್ಲಿ, ಬ್ರಿಟನ್‌ನಲ್ಲಿನ ಲೇಬರ್ ಸರ್ಕಾರ, ಇತ್ತೀಚೆಗೆ ಮುಕ್ತಾಯಗೊಂಡ ಎರಡನೇ ಮಹಾಯುದ್ಧದಿಂದ ದಣಿದಿದೆ, ಹೆಚ್ಚುತ್ತಿರುವ ಪ್ರಕ್ಷುಬ್ಧ ಭಾರತದಲ್ಲಿ ನಿಯಂತ್ರಣವನ್ನು ಮುಂದುವರಿಸಲು ತನಗೆ ಸ್ವದೇಶದಲ್ಲಿ ಜನಾದೇಶ, ಅಂತರರಾಷ್ಟ್ರೀಯ ಬೆಂಬಲ ಅಥವಾ ಸ್ಥಳೀಯ ಶಕ್ತಿಗಳ ವಿಶ್ವಾಸಾರ್ಹತೆ ಇಲ್ಲ ಎಂದು ಅರಿತುಕೊಂಡು 20 ಫೆಬ್ರವರಿ 1947 ರಂದು, ಪ್ರಧಾನ ಮಂತ್ರಿ ಕ್ಲೆಮೆಂಟ್ ಅಟ್ಲೀ ಬ್ರಿಟೀಷ್ ಸರ್ಕಾರವು ಜೂನ್ 1948 ರೊಳಗೆ ಬ್ರಿಟಿಷ್ ಭಾರತಕ್ಕೆ ಸಂಪೂರ್ಣ ಸ್ವ-ಆಡಳಿತವನ್ನು ನೀಡುತ್ತದೆ ಎಂದು ಘೋಷಿಸಿದರು.

ಹೊಸ ವೈಸರಾಯ್, ಲಾರ್ಡ್ ಮೌಂಟ್ ಬ್ಯಾಟನ್, ಅಧಿಕಾರ ಹಸ್ತಾಂತರದ ದಿನಾಂಕವನ್ನು ಮುಂದಿಟ್ಟರು, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಿನ ನಿರಂತರ ವಿವಾದವು ಮಧ್ಯಂತರ ಸರ್ಕಾರದ ಪತನಕ್ಕೆ ಕಾರಣವಾಗಬಹುದು ಎಂದು ನಂಬಿದ್ದರು. ಎರಡನೆಯ ಮಹಾಯುದ್ಧದಲ್ಲಿ ಜಪಾನ್ ಶರಣಾಗತಿಯ ಎರಡನೇ ವಾರ್ಷಿಕೋತ್ಸವವನ್ನು ಅವರು ಆಗಸ್ಟ್ 15 ಅನ್ನು ಅಧಿಕಾರ ವರ್ಗಾವಣೆಯ ದಿನಾಂಕವಾಗಿ ಆರಿಸಿಕೊಂಡರು. ಬ್ರಿಟಿಷ್ ಸರ್ಕಾರವು 3 ಜೂನ್ 1947 ರಂದು ಬ್ರಿಟಿಷ್ ಭಾರತವನ್ನು ಎರಡು ರಾಜ್ಯಗಳಾಗಿ ವಿಭಜಿಸುವ ಕಲ್ಪನೆಯನ್ನು ಒಪ್ಪಿಕೊಂಡಿದೆ ಎಂದು ಘೋಷಿಸಿತು; ಉತ್ತರಾಧಿಕಾರಿ ಸರ್ಕಾರಗಳಿಗೆ ಡೊಮಿನಿಯನ್ ಸ್ಥಾನಮಾನವನ್ನು ನೀಡಲಾಗುವುದು ಮತ್ತು ಬ್ರಿಟಿಷ್ ಕಾಮನ್‌ವೆಲ್ತ್‌ನಿಂದ ಪ್ರತ್ಯೇಕಗೊಳ್ಳಲು ಸೂಚ್ಯ ಹಕ್ಕನ್ನು ಹೊಂದಿರುತ್ತದೆ ಎಂದು ತಿಳಿಸಲಾಯಿತು. ಯುನೈಟೆಡ್ ಕಿಂಗ್‌ಡಮ್‌ನ ಸಂಸತ್ತಿನ ಭಾರತೀಯ ಸ್ವಾತಂತ್ರ್ಯ ಕಾಯಿದೆ 1947 (10 & 11 ಜಿಯೋ 6 ಸಿ. 30) 15 ಆಗಸ್ಟ್ 1947 ರಿಂದ ಜಾರಿಗೆ ಬರುವಂತೆ ಬ್ರಿಟಿಷ್ ಭಾರತವನ್ನು ಭಾರತ ಮತ್ತು ಪಾಕಿಸ್ತಾನದ (ಈಗಿನ ಬಾಂಗ್ಲಾದೇಶವನ್ನು ಒಳಗೊಂಡಂತೆ) ಎರಡು ಹೊಸ ಸ್ವತಂತ್ರ ಪ್ರಭುತ್ವಗಳಾಗಿ ವಿಭಜಿಸಿತು ಮತ್ತು ಹೊಸ ದೇಶಗಳ ಆಯಾ ಘಟಕ ಸಭೆಗಳ ಮೇಲೆ ಸಂಪೂರ್ಣ ಶಾಸಕಾಂಗ ಅಧಿಕಾರವನ್ನು ನೀಡಿತು. ಈ ಕಾಯಿದೆಯು 18 ಜುಲೈ 1947 ರಂದು ರಾಯಲ್ ಸಮ್ಮತಿಯನ್ನು ಪಡೆಯಿತು.

**ಸಮೃದ್ಧಿ ಸುಜ್ಞಾನ**

**ನಾವು ನಿದ್ದೆಗೆಟ್ಟು ಕೆಲಸ ಮಾಡಿದರೆ ಮಾತ್ರ**
**ಇನ್ನೊಬ್ಬರ ನಿದ್ದೆ ಕೆಡಿಸುವ ಸಾಧನೆ ಮಾಡಲು ಸಾಧ್ಯ**

## ಸ್ವಾತ್ರಂತ್ರ್ಯದ ಹಾದಿ

### ಜವಾಹರ್ ಲಾಲ್ ನೆಹರು ರವರ ಟ್ರಿಸ್ಟ್ ವಿಥ್ ಡೆಸ್ಟಿನಿ ಭಾಷಣ

ಜೂನ್ 3, 1947 ರಂದು ಅಂದಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್‌ಬ್ಯಾಟನ್, ಬ್ರಿಟಿಷ್ ಭಾರತ ಸಾಮ್ರಾಜ್ಯವನ್ನು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ರಾಷ್ಟ್ರಗಳಾಗಿ ವಿಭಜಿಸುವುದಾಗಿ ಘೋಷಿಸಿದರು. ಇದರ ನಂತರ ಭಾರತದ ಸ್ವಾತಂತ್ರ್ಯ ಕಾಯಿದೆ 1947 ರ ಅನ್ವಯ ಆಗಸ್ಟ್ 15, 1947 ರಂದು ಭಾರತವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಘೋಷಿಸಲಾಯಿತು. ಅಂದಿನ ಮಧ್ಯರಾತ್ರಿ, (12.15 ರ) ನಂತರ ಜವಾಹರ್‌ಲಾಲ್ ನೆಹರು ಅವರು ದೇಶದ ಪ್ರಥಮ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅಂದು ಅವರು ರಾಷ್ಟ್ರವನ್ನುದ್ದೇಶಿಸಿ, ಟ್ರಿಸ್ಟ್ ವಿಥ್ ಡೆಸ್ಟಿನಿ ಭಾಷಣ ('ಭಾಗ್ಯದೊಡನೆ ಒಪ್ಪಂದ' ಭಾಷಣ) ಮಾಡಿದರು.

ಭಾರತದ ಸ್ವಾತಂತ್ರ್ಯ ದಿನಾಚರಣೆ ಮಧ್ಯರಾತ್ರಿಯ ಗಂಟೆ ಹೊಡೆಯುತ್ತಿದ್ದಂತೆ ಜಗತ್ತು ಮಲಗಿರುವಾಗ ಭಾರತವು ಚಲನಶೀಲತೆ ಮತ್ತು ಸ್ವಾತಂತ್ರ್ಯಕ್ಕೆ ಎಚ್ಚರಗೊಳ್ಳುತ್ತದೆ. ಇತಿಹಾಸದಲ್ಲಿ ಅಪರೂಪವಾಗಿ ಬರುವ ಇಂಥ ಈ ಗಳಿಗೆಯಲ್ಲಿ ಹಳತಿನಿಂದ ಹೊಸತಿಗೆ ಕಾಲಿಡುತ್ತಿದ್ದೇವೆ. ಹಳೆಯ ಯುಗ ಮುಗಿದು ಬಹುಕಾಲ ಅದುಮಿಟ್ಟ ದೇಶವೊಂದರ ಚೇತನವು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಿದೆ..... ಇವತ್ತು ನಾವು ನಮ್ಮ ದುರಾದೃಷ್ಟದ ಕಾಲವನ್ನು ಮುಗಿಸುತ್ತಿದ್ದೇವೆ ಮತ್ತು ಭಾರತವು ತನ್ನನ್ನು ತಾನು ಮತ್ತೆ ಕಂಡುಕೊಳ್ಳುತ್ತಿದೆ ಎಂದು ಅಭಿಪ್ರಾಯಪಟ್ಟರು.

### ಭಾರತದ ಸ್ವಾತಂತ್ರ್ಯ ದಿನಾಚರಣೆ

ಪ್ರಧಾನಮಂತ್ರಿ ನೆಹರು ಮತ್ತು ಉಪಪ್ರಧಾನಮಂತ್ರಿ ಸರ್ದಾರ್ ವಲ್ಲಭಭಾಯ್ ಪಟೇಲ್‌ರು ಲಾರ್ಡ್ ಮೌಂಟ್ ಬ್ಯಾಟನ್ನರನ್ನು ಭಾರತದ ಗವರ್ನರ್ ಜನರಲ್ ಆಗಿ ಮುಂದುವರೆಯಲು ಕೋರಿದರು. ಜೂನ್ 1948 ರಲ್ಲಿ ಅವರ ಸ್ಥಾನಕ್ಕೆ ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಬಂದರು. ಪಟೇಲರು 565 ರಾಜಸಂಸ್ಥಾನಗಳ ಭಾರತದ ರಾಜಕೀಯ ಏಕೀಕರಣದ ಜವಾಬ್ದಾರಿಯನ್ನು ವಹಿಸಿಕೊಂಡರು, ಜುನಾಗಢ, ಜಮ್ಮು ಮತ್ತು ಕಾಶ್ಮೀರ, ಮತ್ತು ಹೈದರಾಬಾದ್ ಸಂಸ್ಥಾನಗಳನ್ನು ಭಾರತಕ್ಕೆ ಸೇರ್ಪಡೆ ಮಾಡುವಲ್ಲಿ ಸೈನಿಕ ಬಲವನ್ನು ಉಪಯೋಗಿಸಿ "ರೇಷ್ಮೆ ಕೈಗವಸಿನಲ್ಲಿ ಉಕ್ಕಿನ ಮುಷ್ಠಿ" ತಂತ್ರವನ್ನು ಉಪಯೋಗಿಸಿದರು.

ಸಂವಿಧಾನ ರಚನಾಸಭೆಯು ಸಂವಿಧಾನದ ಕರಡು ಸಭೆಯನ್ನು 26 ನವೆಂಬರ್ 1949; ರಂದು ಸಿದ್ಧಗೊಳಿಸುವ ಕಾರ್ಯವನ್ನು ಸಂಪೂರ್ಣಗೊಳಿಸಿತು. 26 ಜನವರಿ 1950 ರಂದು ಭಾರತೀಯ ಗಣರಾಜ್ಯ ವನ್ನು ಅಧಿಕೃತವಾಗಿ ಘೋಷಿಸಲಾಯಿತು. ಸಂವಿಧಾನ ರಚನಾಸಭೆಯು ಡಾ. ರಾಜೇಂದ್ರಪ್ರಸಾದರನ್ನು ದೇಶದ ಪ್ರಥಮ ರಾಷ್ಟ್ರಪತಿಯನ್ನಾಗಿ ಚುನಾಯಿಸಿತು. ಅವರು ಗವರ್ನರ್ ಜನರಲ್ ರಾಜ ಗೋಪಾಲಾಚಾರಿಯವರಿಂದ ಅಧಿಕಾರವನ್ನು ಸ್ವೀಕರಿಸಿದರು. ನಂತರ ಸ್ವತಂತ್ರ ಸಾರ್ವಭೌಮ ಭಾರತವು ಇನ್ನೆರಡು ಪ್ರದೇಶಗಳನ್ನು ತನ್ನಲ್ಲಿ ಸೇರಿಸಿಕೊಂಡಿತು. ಅವು 1961 ರಲ್ಲಿ ಪೋರ್ಚುಗೀಸ್ ನಿಯಂತ್ರಣದಿಂದ ವಿಮೋಚನೆಗೊಳಿಸಿದ ಗೋವಾ ಮತ್ತು ಫ್ರೆಂಚರು 1954 ರಲ್ಲಿ ಒಪ್ಪಿಸಿದ ಪಾಂಡಿಚೇರಿ. 1952 ರಲ್ಲಿ ಭಾರತವು ತನ್ನ ಮೊದಲ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿತು. ಶೇ. 62 ಕ್ಕೂ

**ಸಮೃದ್ಧಿ ಸುಜ್ಞಾನ**



ಚಿನ್ನದ ಅದಿರು ಸಂಸ್ಕಾರವಿಲ್ಲದೆ
ಅಪರಂಜಿಯಾಗುವುದಿಲ್ಲ, ಸಂಸ್ಕಾರವಿಲ್ಲದೆ
ಶಿಲೆಯು ಪೂಜಾರ್ಹ ಮೂರ್ತಿಯಾಗುವುದಿಲ್ಲ.
ಉತ್ತಮ ಸಂಸ್ಕಾರವಿಲ್ಲದಿದ್ದರೆ ಮಾನವನು
ಪಶುವಾಗಿಯೇ ಉಳಿಯುತ್ತಾನೆ.

**ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ**


ಹೆಚ್ಚು ಮತದಾರರು ಅದರಲ್ಲಿ ಭಾಗವಹಿಸಿದರು. ಅದರಿಂದಾಗಿ ಭಾರತವು ವಾಸ್ತವದಲ್ಲಿ ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವವಾಯಿತು.

**ವಿಭಜನೆ ಮತ್ತು ಸ್ವಾತಂತ್ರ್ಯ**

ಲಕ್ಷಾಂತರ ಮುಸ್ಲಿಂ, ಸಿಖ್ ಮತ್ತು ಹಿಂದೂ ನಿರಾಶ್ರಿತರು ಸ್ವಾತಂತ್ರ್ಯದ ಸುತ್ತಮುತ್ತಲಿನ ತಿಂಗಳುಗಳಲ್ಲಿ ಹೊಸದಾಗಿ ಚಿತ್ರಿಸಿದ ಗಡಿಗಳನ್ನು ಚಾರಣ ಮಾಡಿದರು. ಪಂಜಾಬ್‌ನಲ್ಲಿ, ಗಡಿಗಳು ಸಿಖ್ ಪ್ರದೇಶಗಳನ್ನು ಅರ್ಧ ಭಾಗಗಳಾಗಿ ವಿಂಗಡಿಸಿದಾಗ, ಬೃಹತ್ ರಕ್ತಪಾತವು ಅನುಸರಿಸಿತು; ಮಹಾತ್ಮ ಗಾಂಧಿಯವರ ಉಪಸ್ಥಿತಿಯು ಕೋಮು ಕೋಪವನ್ನು ಶಮನಗೊಳಿಸಿದ ಬಂಗಾಳ ಮತ್ತು ಬಿಹಾರದಲ್ಲಿ ಹಿಂಸಾಚಾರವನ್ನು ತಗ್ಗಿಸಲಾಯಿತು. ಒಟ್ಟಾರೆಯಾಗಿ, ಹೊಸ ಗಡಿಗಳ ಎರಡೂ ಬದಿಗಳಲ್ಲಿ 250,000 ಮತ್ತು 1,000,000 ಜನರು ಹಿಂಸಾಚಾರದಲ್ಲಿ ಸತ್ತರು. ಇಡೀ ರಾಷ್ಟ್ರವು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತಿರುವಾಗ, ಗಾಂಧಿಯವರು ಕಲ್ಕತ್ತಾದಲ್ಲಿ ಹತ್ಯಾಕಾಂಡವನ್ನು ತಡೆಯುವ ಪ್ರಯತ್ನದಲ್ಲಿ ತಂಗಿದ್ದರು.

14 ಆಗಸ್ಟ್ 1947 ರಂದು, ಪಾಕಿಸ್ತಾನದ ಸ್ವಾತಂತ್ರ್ಯ ದಿನದಂದು, ಪಾಕಿಸ್ತಾನದ ಹೊಸ ಡೊಮಿನಿಯನ್ ಅಸ್ತಿತ್ವಕ್ಕೆ ಬಂದಿತು; ಮುಹಮ್ಮದ್ ಅಲಿ ಜಿನ್ನಾ ಅವರು ಕರಾಚಿಯಲ್ಲಿ ಅದರ ಮೊದಲ ಗವರ್ನರ್ ಜನರಲ್ ಆಗಿ ಪ್ರಮಾಣ ವಚನ ಸ್ವೀಕರಿಸಿದರು.


ಭಾರತದ ಸಂವಿಧಾನ ಸಭೆಯು ತನ್ನ ಐದನೇ ಅಧಿವೇಶನಕ್ಕಾಗಿ ಆಗಸ್ಟ್ 14 ರಂದು ರಾತ್ರಿ 11 ಗಂಟೆಗೆ ನವದೆಹಲಿಯ ಸಂವಿಧಾನ ಭವನದಲ್ಲಿ ಸಭೆ ಸೇರಿತು. ಅಧ್ಯಕ್ಷ ರಾಜೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಈ ಅಧಿವೇಶನದಲ್ಲಿ ಜವಾಹರಲಾಲ್ ನೆಹರು ಅವರು ಭಾರತದ ಸ್ವಾತಂತ್ರ್ಯವನ್ನು ಘೋಷಿಸುವ ಟ್ರಿಸ್ಟ್ ವಿತ್ ಡೆಸ್ಟಿನಿ ಭಾಷಣವನ್ನು ಮಾಡಿದರು. ॐ




**ಮನೆ ಮದ್ದು :**

**ರಕ್ತ ಶುದ್ಧಿಗೆ ಪಪ್ಪಾಯ :** ಪಪ್ಪಾಯ ಹಣ್ಣು ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಈ ಹಣ್ಣಿನಲ್ಲಿ ವಿಟಮಿನ್ ಎ, ಸಿ ಗಳು ಹೆಚ್ಚಿನ ಪ್ರಮಾಣದಲ್ಲಿ ಲಭಿಸುತ್ತವೆ. ನಾರು ಪದಾರ್ಥ ಕೂಡ ಇರುತ್ತದೆ.

# ಶ್ವಾಸಕೋಶದ ಕ್ಯಾನ್ಸರ್



ವಿಶ್ವದಾದ್ಯಂತ ಪತ್ತೆಯಾಗುವ ಅನೇಕ ಕ್ಯಾನ್ಸರ್‌ಗಳ ಪೈಕಿ ಶ್ವಾಸಕೋಶದ ಕ್ಯಾನ್ಸರ್ ಕೂಡ ಒಂದು. ಜಾಗತಿಕವಾಗಿ ಸಾವಿಗೆ ಕಾರಣವಾಗುವ ಐದು ಕ್ಯಾನ್ಸರ್‌ಗಳ ಪೈಕಿ ಶ್ವಾಸಕೋಶದ ಕ್ಯಾನ್ಸರ್ ಕೂಡ ಒಂದು. 2012 ರಲ್ಲಿ ಸುಮಾರು 1.8 ಮಿಲಿಯನ್ ಜನರಲ್ಲಿ ಹೊಸದಾಗಿ ಕ್ಯಾನ್ಸರ್ ಪತ್ತೆಯಾಗಿದೆ. ಶ್ವಾಸಕೋಶದ ಕ್ಯಾನ್ಸರ್‌ನ ಬಗ್ಗೆ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಇದಕ್ಕೆ ಆರಂಭದಲ್ಲಿಯೇ ಚಿಕಿತ್ಸೆ ತೆಗೆದುಕೊಂಡರೆ ವಾಸಿಯಾಗುತ್ತದೆ.

20ನೇ ಶತಮಾನದಲ್ಲಿ ಶ್ವಾಸಕೋಶದ ಕ್ಯಾನ್ಸರ್ ಅನ್ನು ಅತಿ ವಿರಳ ಎಂದು ಹೇಳಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಧೂಮಪಾನ ಮಾಡುವವರ ಸಂಖ್ಯೆ ಹೆಚ್ಚಾಗಿ ವಿಶ್ವದಲ್ಲಿ ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುವವರ ಸಂಖ್ಯೆಯಲ್ಲಿ ಕೂಡ ಏರಿಕೆಯಾಗಿದೆ.

ಶ್ವಾಸಕೋಶದ ಕ್ಯಾನ್ಸರ್‌ಗೂ ಧೂಮಪಾನ ಮಾಡುವುದಕ್ಕೂ ಸಾಕಷ್ಟು ಸಂಬಂಧವಿದೆ ಎಂದು 1950 ರಲ್ಲಿ ನಡೆಸಿದ ಅಧ್ಯಯನದಿಂದ ತಿಳಿದು ಬಂತು. 1962 ರಲ್ಲಿ ಧೂಮಪಾನ ಮಾಡುವುದರಿಂದ ಶ್ವಾಸಕೋಶದ ಕ್ಯಾನ್ಸರ್ ಬರುತ್ತದೆ ಎಂಬುದು ಮೊದಲ ಬಾರಿಗೆ ಪ್ರಕಟಗೊಂಡಿತು. ಧೂಮಪಾನ ಮಾಡದಿರುವವರಿಗೆ ಹೋಲಿಸಿದರೆ ಧೂಮಪಾನ ಮಾಡುವವರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಕಾಣಿಸಿಕೊಳ್ಳುವ ಪ್ರಕರಣ 24–36 ಪಟ್ಟು ಹೆಚ್ಚು ಎಂದು ಸಾಬೀತು ಆಗಿದೆ.

ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನವಾದ ಇಂದು ಜನರಲ್ಲಿ ಈ ಬಗ್ಗೆ ಅರಿವು ಮೂಡಿಸುವುದು ಮತ್ತು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು ಬಹಳ ಮುಖ್ಯವಾದುದು. ಶ್ವಾಸಕೋಶದ ಕ್ಯಾನ್ಸರ್ ಅನ್ನು 19 ನೇ ಶತಮಾನದ ಆರಂಭದಲ್ಲಿ ವೈದ್ಯರು ಮೊದಲು ಗುರುತಿಸಿದ ನಂತರ ಬಹಳ ಸಮಯದವರೆಗೆ ತುಲನಾತ್ಮಕವಾಗಿ ಅಪರೂಪದ ಕಾಯಿಲೆಯಾಗಿತ್ತು. ಅಧ್ಯಯನಗಳ ಪ್ರಕಾರ, ಜನಸಂಖ್ಯೆಯ 1% ರಿಂದ 2% ಕ್ಕಿಂತ ಕಡಿಮೆ ಜನರು ಸುಮಾರು 150 ವರ್ಷಗಳ ಹಿಂದೆ ಈ ಕಾಯಿಲೆಯನ್ನು ಹೊಂದಿದ್ದರು ಮತ್ತು ಯಾರೂ ಅದರ ಬಗ್ಗೆ ಕೇಳಿರಲಿಲ್ಲ.

ನಾವು ಪ್ರಸ್ತುತ ಶತಮಾನವನ್ನು ಅಧ್ಯಯನ ಮಾಡಿದಾಗ, ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಗಿದೆ. 20 ನೇ ಶತಮಾನದ ಆರಂಭದಲ್ಲಿ, ಇದು ಇನ್ನೂ ಅಸಾಮಾನ್ಯವಾಗಿತ್ತು, ಆದರೆ ಕೊನೆಯಲ್ಲಿ, 25 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಪುರುಷ ಕ್ಯಾನ್ಸರ್–ಸಂಬಂಧಿತ ಸಾವುಗಳಿಗೆ ಇದು ಮುಖ್ಯ ಕಾರಣವಾಗಿದೆ

ಶ್ವಾಸಕೋಶದ ಕ್ಯಾನ್ಸರ್ ಅನ್ನು 19 ನೇ ಶತಮಾನದ ಆರಂಭದಲ್ಲಿ ವೈದ್ಯರು ಮೊದಲು ಗುರುತಿಸಿದ ನಂತರ ಬಹಳ ಸಮಯದವರೆಗೆ ತುಲನಾತ್ಮಕವಾಗಿ ಅಪರೂಪದ ಕಾಯಿಲೆಯಾಗಿತ್ತು. ಅಧ್ಯಯನಗಳ ಪ್ರಕಾರ, ಜನಸಂಖ್ಯೆಯ 1% ರಿಂದ 2% ಕ್ಕಿಂತ ಕಡಿಮೆ ಜನರು ಸುಮಾರು 150 ವರ್ಷಗಳ ಹಿಂದೆ ಈ ಕಾಯಿಲೆಯನ್ನು ಹೊಂದಿದ್ದರು ಮತ್ತು ಯಾರೂ ಅದರ ಬಗ್ಗೆ ಕೇಳಿರಲಿಲ್ಲ.

ನಾವು ಪ್ರಸ್ತುತ ಶತಮಾನವನ್ನು ಅಧ್ಯಯನ ಮಾಡಿದಾಗ, ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಗಿದೆ. 20 ನೇ ಶತಮಾನದ ಆರಂಭದಲ್ಲಿ, ಇದು ಇನ್ನೂ ಅಸಾಮಾನ್ಯವಾಗಿತ್ತು, ಆದರೆ ಕೊನೆಯಲ್ಲಿ, 25 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಪುರುಷ ಕ್ಯಾನ್ಸರ್–ಸಂಬಂಧಿತ ಸಾವುಗಳಿಗೆ ಇದು ಮುಖ್ಯ ಕಾರಣವಾಗಿದೆ.

ಪ್ರತಿ ವರ್ಷ ಆಗಸ್ಟ್ 1 ಅನ್ನು ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನ ಎಂದು ಘೋಷಿಸಲಾಗಿದೆ. ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳನ್ನು ತಡೆಗಟ್ಟುವ ಪ್ರಯತ್ನದಲ್ಲಿ ಪ್ರಪಂಚದಾದ್ಯಂತ ಜನರು ಈ ವಿಶಿಷ್ಟ ದಿನವನ್ನು ಸ್ಮರಿಸುತ್ತಾರೆ. ಈ ದಿನದ ಗುರಿಯು ಶ್ವಾಸಕೋಶದ ಕ್ಯಾನ್ಸರ್‌ಗಾಗಿ ಸ್ವಯಂ–ಸ್ಕ್ರೀನಿಂಗ್ ಅನ್ನು ಉತ್ತೇಜಿಸುವುದು ಮತ್ತು ರೋಗದ ಬಗ್ಗೆ ನಿಮಗೆ ಸಾಧ್ಯವಾದಷ್ಟು ಮಾಹಿತಿಯನ್ನು ಹರಡುವುದು.

**ಇತಿಹಾಸ**

2012 ರಲ್ಲಿ, ಫೋರಮ್ ಆಫ್ ಇಂಟರ್ನ್ಯಾಷನಲ್ ರೆಸ್ಪಿರೇಟರಿ ಸೊಸೈಟೀಸ್, ಇಂಟರ್ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಸ್ಟಡಿ ಆಫ್ ಲಂಗ್ ಕ್ಯಾನ್ಸರ್ ಮತ್ತು ಅಮೇರಿಕನ್ ಕಾಲೇಜ್ ಆಫ್ ಚೆಸ್ಟ್ ಫಿಸಿಶಿಯನ್ಸ್ ಜೊತೆಯಲ್ಲಿ ಶ್ವಾಸಕೋಶದ ಕ್ಯಾನ್ಸರ್ ಮತ್ತು ಸಂಬಂಧಿತ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಅಭಿಯಾನವನ್ನು ಪ್ರಾರಂಭಿಸಿತು. ಶ್ವಾಸಕೋಶದ ಕ್ಯಾನ್ಸರ್‌ನ ವಿಶ್ವ ಸಮ್ಮೇಳನ (WCLC) ವಿಶ್ವದಲ್ಲೇ ಅತ್ಯಂತ ವ್ಯಾಪಕವಾಗಿ ಗುರುತಿಸಲ್ಪಟ್ಟ ಸಂಸ್ಥೆಯಾಗಿದ್ದು, ಇದು ಪ್ರಾಥಮಿಕವಾಗಿ ಶ್ವಾಸಕೋಶದ ಕ್ಯಾನ್ಸರ್‌ಗೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ಅದರ ಬಗ್ಗೆ ಜಾಗೃತಿ ಮೂಡಿಸುತ್ತದೆ.


ನಂತರ 20 ನೇ ಶತಮಾನದ ಆರಂಭದಲ್ಲಿ, ಇದು ಇನ್ನೂ ಅಸಾಮಾನ್ಯವಾಗಿತ್ತು, ಆದರೆ ಅಂತ್ಯದ ವೇಳೆಗೆ, 25 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಪುರುಷ ಕ್ಯಾನ್ಸರ್–ಸಂಬಂಧಿತ ಸಾವುಗಳಿಗೆ ಇದು ಮುಖ್ಯ ಕಾರಣವಾಗಿದೆ. ಈ ಹಠಾತ್ ಸ್ಪೈಕ್ ಹೇಗೆ ಅಥವಾ ಏನು ಎಂದು ಯಾರಿಗೂ ತಿಳಿದಿರಲಿಲ್ಲ. 1930 ರ ದಶಕದಲ್ಲಿ ಪ್ರಕಟವಾದ ವೈಜ್ಞಾನಿಕವಾಗಿ ಸಂಬಂಧಿತ ಕೈಪಿಡಿ, ಈ ಬೆಳವಣಿಗೆಯು ವಾಯುಮಾಲಿನ್ಯದ ನೇರ ಪರಿಣಾಮ, ಹೆಚ್ಚಿದ ದಟ್ಟಣೆ ಮತ್ತು ವಿಶ್ವ ಸಮರ 01 ರ ಸಮಯದಲ್ಲಿ ಅನಿಲಗಳಿಗೆ ಹೆಚ್ಚಿದ ಮಾನ್ಯತೆ ಎಂದು ಊಹಿಸಲಾಗಿದೆ. ಈ ಕೈಪಿಡಿಯು ಇತರ ಅನೇಕರಂತೆ ವಿವರಣೆಯನ್ನು ನೀಡಲು ಸಾಧ್ಯವಾಗಲಿಲ್ಲ. ಮೇಲೆ ತಿಳಿಸಲಾದ ಯಾವುದೇ ಕಾರಣಗಳಿಲ್ಲದೆ ಶ್ವಾಸಕೋಶದ ಕ್ಯಾನ್ಸರ್ ಪ್ರಮಾಣವು ರಾಷ್ಟ್ರಗಳಲ್ಲಿ ಏಕೆ ಹೆಚ್ಚಾಯಿತು.

ಈ ಕಲ್ಪನೆಯ ಮೇಲಿನ ಸಂಶೋಧನೆಯು ಕಡಿಮೆ ಗಮನವನ್ನು ಪಡೆದಿದ್ದರೂ, ಧೂಮಪಾನವು ಸಹ ಕೊಡುಗೆಯ ಪಾತ್ರವೆಂದು ಭಾವಿಸಲಾಗಿದೆ. 1940 ಮತ್ತು 1950 ರ ದಶಕದಲ್ಲಿ ನಡೆಸಿದ ಸಂಶೋಧನೆಯು ಶ್ವಾಸಕೋಶದ ಕ್ಯಾನ್ಸರ್‌ಗೆ ಧೂಮಪಾನವನ್ನು ಕಟ್ಟಿಹಾಕುವ ಕಾಂಕ್ರೀಟ್ ಪುರಾವೆಗಳನ್ನು ಒದಗಿಸಿದ ನಂತರ ಜನರು ನಿಕೋಟಿನ್ ಮತ್ತು ತಂಬಾಕಿನ ಋಣಾತ್ಮಕ ಪರಿಣಾಮಗಳ ಬಗ್ಗೆ ತಿಳಿದಿದ್ದರು.

**ಮಹತ್ವ**

ಭಾರತದಲ್ಲಿ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ 2022 ರಲ್ಲಿ 1.46 ಮಿಲಿಯನ್‌ನಿಂದ 2025 ರಲ್ಲಿ 1.57 ಮಿಲಿಯನ್‌ಗೆ ಹೆಚ್ಚಾಗಬಹುದು. ಸ್ತನ ಕ್ಯಾನ್ಸರ್‌ಗೆ ಒಳಗಾಗುವ ಮಹಿಳೆಯರಿಗಿಂತ ಪುರುಷರಿಗೆ ಶ್ವಾಸಕೋಶದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು. ಸಣ್ಣ ಜೀವಕೋಶದ ಶ್ವಾಸಕೋಶದ ಕ್ಯಾನ್ಸರ್ ಮತ್ತು ಸಣ್ಣ–ಅಲ್ಲದ ಜೀವಕೋಶದ ಶ್ವಾಸಕೋಶದ ಕ್ಯಾನ್ಸರ್ ಶ್ವಾಸಕೋಶದ ಕ್ಯಾನ್ಸರ್‌ನ ಎರಡು ಪ್ರಮುಖ ರೂಪಗಳಾಗಿವೆ, ಇವುಗಳನ್ನು ಸೂಕ್ಷ್ಮದರ್ಶಕದ ಅಡಿಯಲ್ಲಿ ಕ್ಯಾನ್ಸರ್ ಕೋಶಗಳು ಹೇಗೆ ಕಾಣುತ್ತವೆ ಎಂಬುದರ ಪ್ರಕಾರ ವರ್ಗೀಕರಿಸಲಾಗಿದೆ. ಸಣ್ಣವಲ್ಲದ ಶ್ವಾಸಕೋಶದ ಕ್ಯಾನ್ಸರ್ಗೆ ಹೋಲಿಸಿದರೆ, ಸಣ್ಣ ಜೀವಕೋಶದ ಶ್ವಾಸಕೋಶದ ಕ್ಯಾನ್ಸರ್ ಹೆಚ್ಚು ವೇಗವಾಗಿ ಹರಡುತ್ತದೆ. ಮಾರಣಾಂತಿಕ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಒಂದು ದಿನವನ್ನು ಮೀಸಲಿಡುವುದು ಬಹುಮುಖ್ಯವಾಗಿದೆ, ಇದರಿಂದ ಅದನ್ನು ಮೊದಲೇ ಕಂಡುಹಿಡಿಯಬಹುದು.

ಶ್ವಾಸಕೋಶದ ಕ್ಯಾನ್ಸರ್‌ಗೆ ಸಂಬಂಧಿಸಿದ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬುದರ ಕುರಿತು ಜನರಿಗೆ ಶಿಕ್ಷಣ ನೀಡುವುದು ಅಭಿಯಾನದ ಗುರಿಯಾಗಿದೆ, ರೋಗದಿಂದ ಚೇತರಿಸಿಕೊಂಡವರಿಗೆ ಮತ್ತು ರೋಗನಿರ್ಣಯ ಮಾಡಿದವರಿಗೆ ಶ್ವಾಸಕೋಶದ ಕ್ಯಾನ್ಸರ್‌ನ ಮುಖ್ಯ ಕಾರಣಗಳು ಮತ್ತು ಅದರ ತಡೆಗಟ್ಟುವ ತಂತ್ರಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸುವುದು ಪ್ರಮುಖ ಗುರಿಯಾಗಿದೆ. ॐ



# ವಿಶ್ವ ಆನೆಗಳ ದಿನ

ವಿಶ್ವ ಆನೆಗಳ ದಿನವು ಆಗಸ್ಟ್ 12 ರಂದು ಅಂತರರಾಷ್ಟ್ರೀಯ ವಾರ್ಷಿಕ ಕಾರ್ಯಕ್ರಮವಾಗಿದ್ದು, ವಿಶ್ವದ ಆನೆಗಳ ಸಂರಕ್ಷಣೆ ಮತ್ತು ರಕ್ಷಣೆಗೆ ಸಮರ್ಪಿಸಲಾಗಿದೆ. ಜಗತ್ತಿನಲ್ಲಿ ಹೆಚ್ಚು ಬಲಿಷ್ಠ ಪ್ರಾಣಿಯೆಂದರೆ ಅದು ಆನೆ. ಗಜರಾಜನಷ್ಟು ಬಲಿಷ್ಠವಾದ, ಶಕ್ತಿಶಾಲಿಯಾದ ಪ್ರಾಣಿ ವನ್ಯಜೀವಿಗಳಲ್ಲಿ ಮತ್ತೊಂದಿಲ್ಲ. ದೊಡ್ಡದಾದ ಕಿವಿ, ಉದ್ದನೆಯ ಸೊಂಡಿಲು, ಬೃಹದಾಕಾರದ ದೇಹ ಈ ಎಲ್ಲದರಿಂದಲೂ ಸದಾ ವಿಭಿನ್ನವಾಗಿ ನಿಲ್ಲುವ ಪ್ರಾಣಿ ಆನೆ. ಆನೆಯು ಪ್ರತಿಯೊಬ್ಬ ಮನುಷ್ಯನಿಗೆ ಅಚ್ಚು-ಮೆಚ್ಚು. ಆನೆ ಎಷ್ಟು ಮುದ್ದು ಅಷ್ಟೇ ಭಯವನ್ನು ಹುಟ್ಟಿಸಬಲ್ಲ ಪ್ರಾಣಿ ಕೂಡ ಹೌದು.

ಗಜರಾಜ ಎಂದಾಗ ಜನರಿಗೆ ಎಷ್ಟು ಭಯವೋ, ಅಷ್ಟೇ ಪ್ರೀತಿಯು ಇದೆ. ಗಜರಾಜನನ್ನು ನಮ್ಮ ದೇಶದಲ್ಲಿ ಪೂಜಿಸಲಾಗುತ್ತದೆ. ಅಂತಹ ಗಜರಾಜನ ದಿನವನ್ನು ಜಗತ್ತಿನಾದ್ಯಂತ ಪ್ರತಿವರ್ಷ ಆಗಸ್ಟ್ 12 ರಂದು ಆನೆಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಈ ವಿಶ್ವ ಆನೆಗಳ ದಿನಾಚರಣೆ ಮೊದಲು ಪ್ರಾರಂಭವಾಗಿದ್ದು 2012 ರ ಆಗಸ್ಟ್ 12 ರಂದು.

ಅದರಲ್ಲೂ ಏಷ್ಯನ್ ಮತ್ತು ಆಫ್ರಿಕನ್ ಆನೆಗಳಿಗೆ ಉಂಟಾಗಿರುವ ಸಂಕಷ್ಟವನ್ನು ಎತ್ತಿ ತೋರಿಸಲು, ಅದರ ಬಗ್ಗೆ ಅರಿವು ಮೂಡಿಸಲು ಆನೆಗಳ ದಿನಾಚರಣೆ ಪ್ರಾರಂಭಿಸಲಾಯಿತು. ಇಂದಿಗೂ ಆನೆ ದಿನಾಚರಣೆಯನ್ನು ಅರಣ್ಯ ಇಲಾಖೆ, ಸರ್ಕಾರ ಸಂಭ್ರಮದಿಂದ ಆಚರಿಸುತ್ತದೆ. ಈ ದಿನದಂದು ಜನರಿಗೆ ಆನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಆನೆಯ ಮಹತ್ವವನ್ನು ಇಂದಿನ ದಿನ ತಿಳಿಸಿಕೊಡಲಾಗುತ್ತದೆ.

**ವಿಶ್ವ ಆನೆ ದಿನಾಚರಣೆ ಇತಿಹಾಸ**

ಅವಸಾನದ ಅಂಚಿನಲ್ಲಿರುವ ಆನೆಗಳನ್ನು ರಕ್ಷಿಸುವ ಸಲುವಾಗಿ 2012 ಆಗಸ್ಟ್ 12 ರಿಂದ ವಿಶ್ವ ಆನೆ ದಿನವನ್ನು ಆಚರಿಸಲು ಆರಂಭಿಸಲಾಯಿತು. ಇದಕ್ಕೆ ಪ್ರಮುಖ ಕಾರಣಿಕರ್ತರು ಕೆನಡಾದ ಚಿತ್ರ ನಿರ್ದೇಶಕರಾದ ಪ್ಯಾಟ್ರೇಷಿಯಾ ಸಿಮ್ಸ್ ಮತ್ತು ಮೈಕಲ್ ಕ್ಲಾರ್ಕ್ ಹಾಗೂ ಥೈಲ್ಯಾಂಡಿನ ಆನೆ ಉಳಿಯುವಿಕೆ ಪ್ರಧಾನ ಕಾರ್ಯದರ್ಶಿಯಾದ ಶಿವಪೋರ್ನ್ ದರ್ದಾರನಂದ. ಆನೆಯ ಕುರಿತಾಗಿಯೇ ಮೊದಲ ವಿಶ್ವ ಆನೆ ದಿನಾಚರಣೆ ದಿನದಂದು ಹಾಲಿವುಡ್ ನಟ ವಿಲಿಯಂ ಶಟ್ನೇರ್ "ರಿಟನ್ಸ್ ಟೂ ಫಾರೆಸ್ಟ್" ಎಂಬ ಸಾಕ್ಷ್ಯಚಿತ್ರವನ್ನು ನಿರ್ಮಿಸಿದ್ದರು. ವಿಶ್ವದ ವಿವಿಧ ದೇಶಗಳಲ್ಲಿರುವ 65 ವನ್ಯಜೀವಿ ಸಂಸ್ಥೆಗಳು ಹಾಗೂ ಲಕ್ಷಾಂತರ ಮಂದಿ ವನ್ಯಜೀವಿ ತಜ್ಞರು ವಿಶ್ವ ಆನೆ ದಿನಾಚರಣೆಗೆ ಬೆಂಬಲ ಸೂಚಿಸಿದ್ದರು.

**ವಿಶ್ವ ಆನೆ ದಿನಾಚರಣೆ ಮಹತ್ವ**

ಆನೆಗಳ ಸಹಜ ಜೀವನ ನಡೆಸಲು ಮನುಷ್ಯರು ಅನುವು ಮಾಡಿಕೊಡಬೇಕು. ಆ ಪ್ರಾಣಿಗಳಿಗೆ ಅಗತ್ಯವಿರುವ ಪ್ರದೇಶ ಸುರಕ್ಷತೆಯನ್ನು ಒದಗಿಸಿಕೊಡಬೇಕು. ಅವುಗಳನ್ನು ಬೇಟೆಯಾಡುವುದನ್ನು ನಿಲ್ಲಿಸಬೇಕು ಎಂಬುವುದನ್ನು ಸಾರುವುದೇ ಈ ವಿಶ್ವ ಆನೆಗಳ ದಿನದ ಪ್ರಮುಖ ಉದ್ದೇಶವಾಗಿದೆ. ಇದೇ ಕಾರಣಕ್ಕೆ ಆಗಸ್ಟ್ 12 ರಂದು ಆನೆಗಳ ದಿನವಾಗಿ ಆಚರಣೆ ಮಾಡಲಾಗುತ್ತಿದೆ. ದಂತ ಮತ್ತು ಇತರ ಕಾರಣಕ್ಕಾಗಿ ಆನೆಗಳ ಬೇಟೆಯನ್ನು ನಿಲ್ಲಿಸಬೇಕು. ಕಾಡಾನೆಗಳ ಆವಾಸಗಳನ್ನು ರಕ್ಷಿಸಬೇಕಿದೆ. ಅಲ್ಲಿ ಮನುಷ್ಯ ಹಸ್ತಕ್ಷೇಪ ಮಾಡಬಾರದು.

**ಆನೆಗಳ ಜೀವನ ಪದ್ಧತಿ**


ಆನೆಗಳು ಸಹ ಮನುಷ್ಯರಂತೆಯೆ ಕುಟುಂಬ ಜೀವನವನ್ನು ನಡೆಸುತ್ತವೆ. ಸಾಮಾನ್ಯವಾಗಿ ಆನೆಗಳು ತಮ್ಮದೇ ಆದ ಸಾಮಾಜಿಕ ನಿಯಮದಡಿ ಬದುಕುತ್ತವೆ. ಹೆಣ್ಣು ಆನೆಗಳು ತಮ್ಮ ಜೀವನವನ್ನು ಸಂಪೂರ್ಣವಾಗಿ ಕುಟುಂಬ ವ್ಯವಸ್ಥೆಯಲ್ಲಿಯೇ ಕಳೆಯುತ್ತವೆ. ಸಾಮಾನ್ಯವಾಗಿ ಆನೆಗಳ ಕುಟುಂಬಗಳು 5 ರಿಂದ 15 ಆನೆಗಳನ್ನು ಒಳಗೊಂಡಿರುತ್ತವೆ. ಅನೇಕ ಎಳೆಯ ಮರಿ ಆನೆಗಳನ್ನು ಈ ಆನೆಗಳ ಗುಂಪುಗಳು ಹೊಂದಿರುತ್ತವೆ. ಜೊತೆಗೆ ಹೆಣ್ಣಾನೆಗಳು ತಮ್ಮ ಗುಂಪಿನಿಂದ ಹೊರಗೆ ಬಂದು ತಮ್ಮದೇ ಕುಟುಂಬವನ್ನು ಕಟ್ಟಿಕೊಳ್ಳುತ್ತವೆ.

ಆನೆಗಳಲ್ಲಿ ಪ್ರಮುಖವಾಗಿ ಎರಡು ತಳಿಗಳಿವೆ. ಒಂದು ಆಫ್ರಿಕನ್ ಆನೆ ಹಾಗೂ ಮತ್ತೊಂದು ಏಷ್ಯನ್ ಆನೆ. ಹೀಗೆ ಎರಡು ತಳಿಗಳಿದ್ದರು ಈ ಆನೆಗಳಲ್ಲಿ ಬಹಳಷ್ಟು ಸಾಮ್ಯತೆ ಇದೆ. ಆನೆ ಭೂಮಿಯ ಮೇಲಿನ ದೈತ್ಯ ಪ್ರಾಣಿ. ಜೊತೆಗೆ ನೆಲದ ಮೇಲೆ ವಾಸಿಸುವ ಪ್ರಾಣಿಗಳಲ್ಲಿ ಆನೆ ಗರ್ಭಾವಸ್ಥೆ ಕಾಲ ಎಲ್ಲಕ್ಕಿಂತ ಅತ್ಯಂತ ದೀರ್ಘವಾಗಿರುತ್ತದೆ. ಆನೆ ಗರ್ಭಾವಸ್ಥೆ ಕಾಲ ಸರಿಸುಮಾರು 22 ತಿಂಗಳು.

ಆಗ ತಾನೆ ಜನಿಸಿದ ಆನೆ ಮರಿ ಬರೋಬ್ಬರಿ 100 ರಿಂದ 120 ಕೆ.ಜಿ ತನಕ ತೂಗುತ್ತದೆ. ಆನೆಗಳು ದೀರ್ಘಾಯುಷಿಯಾಗಿದ್ದು, ಸುಮಾರು 70 ವರ್ಷಗಳ ಕಾಲ ಆನೆ ಬದುಕುತ್ತದೆ. ದಂತಗಳಿಗಾಗಿ ಹಾಗೂ ಇನ್ನಿತರ ಕಾರಣಕ್ಕಾಗಿ ಆನೆಗಳನ್ನು ಹತ್ಯೆ ಮಾಡುತ್ತಿರುವುದರಿಂದ ಆನೆಯ ಸರಾಸರಿಯ ವಯಸ್ಸು ಕಡಿಮೆಯಾಗುತ್ತಿದೆ. ಹೀಗಾಗಿ ಜಗತ್ತಿನೆಲ್ಲೆಡೆ ಆನೆಗಳನ್ನು ಸಂರಕ್ಷಿತ ಜೀವಿ ಎಂದು ಪರಿಗಣಿಸಿ, ಕಾಪಾಡಿಕೊಳ್ಳಲಾಗುತ್ತದೆ.

**ಆನೆಗಳ ಅಂಕಿ ಸಂಖ್ಯೆ**

ಆನೆಗಳ ಹತ್ಯೆ ತಡೆಯಲು 1992 ರಲ್ಲಿ ಎಲಿಫಂಟ್ ಪ್ರಾಜೆಕ್ಟ್ ಯೋಜನೆಯನ್ನು ಆರಂಭಿಸಲಾಗಿತ್ತು. ಈ ಯೋಜನೆ ಸಮರ್ಪಕವಾಗಿ ಅನುಷ್ಠಾನಕ್ಕೆ 2010 ರಲ್ಲಿ ಕೇಂದ್ರ ಸರ್ಕಾರ ಎಲಿಫಂಟ್ ಟಾಸ್ಕ್ ಫೋರ್ಸ್ ರಚನೆ ಮಾಡಿತು. ವಿಶ್ವದಲ್ಲಿ ಆನೆಗಳ ಸಂಖ್ಯೆ ಎಂಟು ಲಕ್ಷಗಳಿದ್ದು, ಆಫ್ರಿಕಾ ಖಂಡದಲ್ಲಿಯೇ ಏಳು ಲಕ್ಷ ಆನೆಗಳಿವೆ. ಇನ್ನೂ ಏಷ್ಯಾದಲ್ಲಿ ಒಂದು ಲಕ್ಷ ಆನೆಗಳಿದ್ದು, ಭಾರತದಲ್ಲಿ 28,000 ಆನೆಗಳಿವೆ ಎಂದು ಅಂದಾಜಿಸಲಾಗಿದೆ. ॐ



**ಸಮೃದ್ಧಿ ಸುಜ್ಞಾನ**

**ಒಂದು ಒಳ್ಳೆಯ ಹಾಡು, ಒಂದು ಒಳ್ಳೆಯ ಪುಸ್ತಕ, ಒಬ್ಬ ಒಳ್ಳೆಯ ವ್ಯಕ್ತಿ, ಜೀವನದಲ್ಲಿ ಇದ್ದರೆ ಉತ್ತಮವಾದ ಸಂಭಂಧ ಭಾಂದವ್ಯ, ಅದು ವಜ್ರ ಸಮಾನ ಮತ್ತು ದೇವರ ಆಶೀರ್ವಾದ.**

# ಮಾವಿನ ಇಳುವರಿ



ಕಸಿ ಮಾವಿನ ಮರಗಳು 4ನೆಯ ವರ್ಷದಿಂದ ಫಲಕೊಡಲು ಪ್ರಾರಂಭಿಸುವುವು. ಮೊದ–ಮೊದಲು ಇಳುವರಿ ತುಂಬ ಕಡಿಮೆ. ಕಾಯಿಗಳ ಸಂಖ್ಯೆ ಮೊದಲು ಮರಕ್ಕೆ 10–15 ಇರುತ್ತಿದ್ದು 6ನೆಯ ವರ್ಷಕ್ಕೆ 50–75 ಆಗಿ 16ನೆಯ ವರ್ಷಕ್ಕೆ 300–500 ಕ್ಕೇರುತ್ತದೆ. 20 ರಿಂದ 40 ವರ್ಷ ವಯಸ್ಸಿನ ಮರಗಳು ತಲಾ 1000–3000 ಹಣ್ಣುಗಳನ್ನು ಕೊಡುವುದುಂಟು. ಲಂಗರಾ, ದಸೇರಿ, ರಸಪೂರಿ, ನೀಲಮ್, ತೋತಾಪುರಿ (ಬ್ಯಾಂಗಲೂರ), ಸುವರ್ಣರೇಖ ಮುಂತಾದ ಬಗೆಗಳು ಅಧಿಕ ಇಳುವರಿ ಕೊಡುವವೆಂದು ಹೆಸರಾಗಿದ್ದರೆ (800–3000 ಹಣ್ಣುಗಳು), ಜಹಾಂಗೀರ್ ಬಗೆ ಕೇವಲ 200–250 ಹಣ್ಣುಗಳನ್ನು ಮಾತ್ರ ಕೊಡುತ್ತದೆ.

ಮಾವಿನಹಣ್ಣಿನ ಸುಗ್ಗಿ ದಕ್ಷಿಣ ಭಾರತದಲ್ಲಿ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಆರಂಭವಾಗಿ ಮೇ ವೇಳೆಗೆ ಮುಗಿಯುತ್ತದಾದರೆ ಉತ್ತರ ಭಾರತದಲ್ಲಿ ಜೂನ್ ಸಮಯಕ್ಕೆ ಆರಂಭವಾಗಿ ಆಗಸ್ಟ್ ಕೊನೆಯ ತನಕ ಇರುತ್ತದೆ.

ಕಾಯಿಗಳು ಪೂರ್ಣ ಬಲಿತಾಗ ಆದರೆ ಇನ್ನೂ ಹಸುರಾಗಿರುವಾಗ ಕೊಯ್ಲು ಆರಂಭವಾಗುತ್ತದೆ. ಚೆನ್ನಾಗಿ ಬಲಿತ ಕಾಯಿಗಳನ್ನು ಸಂಗ್ರಹ ಕೋಣೆಗಳಲ್ಲಿ ಬತ್ತದ ಒಣಹುಲ್ಲು ಇಲ್ಲವೆ ಗೋದಿ ತೌಡಿನ ಹಾಸಿನ ಮೇಲಿರಿಸಿ ಒಂದು ವಾರ ಕಾಲ ಇರಿಸಿ ಮಾಗಲು ಬಿಡಲಾಗುತ್ತದೆ. ಬಿದಿರಿನ ಬುಟ್ಟಿಗಳಲ್ಲಿ ಇಲ್ಲವೆ ಮರದ ಪೆಟ್ಟಿಗೆಗಳಲ್ಲಿ ಹಣ್ಣುಗಳನ್ನು ಇರಿಸಿ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ.

**ಉಪಯೋಗಗಳು**

ಮಾವಿನ ಹಣ್ಣು ಅತ್ಯಂತ ರುಚಿಕರವಾಗಿದ್ದು, ಪ್ರಪಂಚದಾದ್ಯಂತ ಬೇಡಿಕೆಯಲ್ಲಿದೆ. ಕೆಲವು ತಳಿಗಳು ಪಾನೀಯ ತಯಾರಿಕೆಗೆ ಉಪಯುಕ್ತ. ಕಾಡು ಮಾವಿನ ಜಾತಿಗಳಲ್ಲಿ ಅಪ್ಪೆ ಮತ್ತು ಕೆಲವು ಉಪ್ಪಿನಕಾಯಿ ತಯಾರಿಕೆಗೆ ಬಳಸಲ್ಪಡುತ್ತಿದೆ. ಎಳೆಯ ಮತ್ತು ಮಾಗದ ಕಾಯಿಗಳನ್ನು ಉಪ್ಪಿನಕಾಯಿ, ಚಟ್ನಿ ಮುಂತಾದ ರೂಪಗಳಲ್ಲಿ ಮತ್ತು ವಿವಿಧ ತಿನಿಸುಗಳ ಜೊತೆಯಲ್ಲಿ ಬಳಸಲಾಗುತ್ತದೆ. ಮಾಗಿದ ಹಣ್ಣುಗಳನ್ನು ರಸ, ಜಾಮ್, ಜೆಲ್ಲಿ, ಮುರಬ್ಬ, ಮಾವಿನಹಪ್ಪಳ (ಆಮ್ ಪಾಪಡ್) ಇತ್ಯಾದಿ ರೂಪಗಳಲ್ಲಿ ಸೇವಿಸಲಾಗುತ್ತದೆ.


ಜಾವ, ಫಿಲಿಪೀನ್ಸ್ ದೇಶಗಳಲ್ಲಿ ಮಾವಿನ ಎಳೆಯ ಚಿಗುರನ್ನು ತರಕಾರಿಯಾಗಿ ಉಪಯೋಗಿಸುವುದಿದೆ. ಎಲೆತೊಪ್ಪಲು ದನಗಳಿಗೆ ಮೇವು ಕೂಡ. ಎಲೆಗಳನ್ನು ಸುಟ್ಟು ಪಡೆಯುವ ಬೂದಿಯನ್ನು ಸುಟ್ಟಗಾಯ ವಾಸಿಮಾಡಲು ಬಳಸುವುದುಂಟು. ಒಣಗಿಸಿದ ಮಾವಿನ ಹೂಗಳು ಅತಿಸಾರ, ಆಮಶಂಕೆಗಳಿಗೆ ಒಳ್ಳೆಯ ಮದ್ದು ಎನಿಸಿವೆ. ಮಾವಿನ ತೊಗಟೆಯಲ್ಲಿ ಟ್ಯಾನಿನ್ ಇದೆಯಾಗಿ ಚರ್ಮ ಹದಗೊಳಿಸಲೂ ಪ್ರತಿಬಂಧಕವಾಗಿಯೂ ಇದು ಬಳಕೆಯಾಗುತ್ತದೆ. ತೊಗಟೆಯಿಂದ ಪಡೆಯುವ ರಂಗನ್ನು ಹತ್ತಿ, ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳಿಗೆ ತಿಳಿಹಳದಿ ಬಣ್ಣ ಕೊಡಲು ಉಪಯೋಗಿಸುವರು. ಮಾವಿನಮರದಿಂದ ಸಾಕಷ್ಟು ಒಳ್ಳೆಯ ಗೋಂದು ಲಭಿಸುತ್ತದೆ.

ಮಾವಿನಮರದ ಚೌಬೀನೆ ಸಾಕಷ್ಟು ದೃಢವಾದುದು, ಗಟ್ಟಿಯಾದುದೂ ಆಗಿರುವುದರಿಂದ ಹಲವಾರು ತೆರನ ಮರಗೆಲಸಗಳಿಗೆ ಒದಗುತ್ತದೆ.

**ಮನೆ ಮದ್ದು :**

**ತಣ್ಣೀರಿನಿಂದ ತಲೆಸ್ನಾನ ಮಾಡುವುದರಿಂದ ತಲೆಯಲ್ಲಿನ ಹೊಟ್ಟಿನ ಸಮಸ್ಯೆ ನಿವಾರಣೆಯಾಗುತ್ತದೆ.**

**ಮಾವಿನಹಣ್ಣಿನ ಸಾರ**



ಮಾವಿನ ಹಣ್ಣು, ಹಣ್ಣುಗಳ ರಾಜ ಎಂದು ಪರಿಗಣಿಸಲ್ಪಟ್ಟಿದೆ. ಮಾವಿನ ಹಣ್ಣಿನ ಆಲ್ಫಾನ್ಸೋ ಜಾತಿಯ 100 ಗ್ರಾಂ ಹಣ್ಣಿನಲ್ಲಿ ಇರುವ (ಅಂದಾಜು) ಸಾರ; ನೀರು –81.6 ಗ್ರಾಂ, ಪ್ರೋಟೀನ್ 0.9 ಗ್ರಾಂ., ಕೊಬ್ಬು 0.4 ಗ್ರಾಂ, ಕಾರ್ಬೋಹೈಡ್ರೇಟ್ (ಸಕ್ಕರೆ) –16.3ಗ್ರಾಂ, ನಾರು – 0.4 ಗ್ರಾಂ, ಸುಣ್ಣ –0.40 ಮಿ ಗ್ರಾಂ, ರಂಜಕ – 16.0 ಮಿ ಗ್ರಾಂ, ಪೊಟ್ಯಾಸಿಯಂ –2000.0 ಮಿ ಗ್ರಾಂ, ಸೋಡಿಯಂ –9.0 ಮಿ ಗ್ರಾಂ, ವಿಟಮಿನ್ (ಅನ್ನಾಂಗ) ಎ – 20,000 ಐ.ಯು, ವಿಟಮಿನ್ (ಅನ್ನಾಂಗ) ಬಿ 1 – 0.08 ಮಿ ಗ್ರಾಂ, ವಿಟಮಿನ್ (ಅನ್ನಾಂಗ)ಬಿ 2 –0.09 ಮಿ ಗ್ರಾಂ, ವಿಟಮಿನ್ (ಅನ್ನಾಂಗ) ಸಿ 125.0 ಮಿ ಗ್ರಾಂ, ನಿಯಾಚಿನ್ 4.1 ಮಿ ಗ್ರಾಂ, ಕ್ಯಾಲರೀಗಳು 50.

ವಿಟಮಿನ್ 'ಎ' ಹೆಚ್ಚು ಇರುವುದರಿಂದ ಕಣ್ಣಿನ ಆರೋಗ್ಯಕ್ಕೆ ಒಳ್ಳೆಯದೆಂದು ಹೇಳಲಾಗಿದೆ. ತೊಳೆಯದ, ಅತಿ ಗಳಿತ (ಕೊಳೆತ) ಹಣ್ಣು, ಅರ್ಧ ಮಾಗಿದ ಹಣ್ಣು ಅತಿಸಾರಕ್ಕೆ ಕಾರಣವಾಗಬಹುದು. ಮಾಗಿದ ಹಣ್ಣು ಆರೋಗ್ಯಕ್ಕೆ ಒಳ್ಳೆಯದು. ಮಾಗಿದ ಹಣ್ಣಿನಲ್ಲಿ ಇರುವ ಮುಖ್ಯ ಸಕ್ಕರೆಗಳೆಂದರೆ ಸ್ಯೂಕ್ರೋಸ್, ಗ್ಲೂಕೋಸ್ ಮತ್ತು ಫ್ರಕ್ಟೋಸ್. ಇನ್ನೂ ಕಾಯಿ ಹಂತದಲ್ಲಿರುವಾಗ ಸಿಟ್ರಿಕ್, ಮ್ಯಾಲಿಕ್, ಆಕ್ಸಾಲಿಕ್, ಸಕ್ಸಿನಿಕ್ ಆಮ್ಲಗಳೂ ಗುರುತಿಸಲಾಗದ ಇನ್ನೆರಡು ಆಮ್ಲಗಳೂ ಇರುವುವು. ಮಾಗುತ್ತ ಬಂದಂತೆ ಆಮ್ಲತೆ ಕಡಿಮೆಯಾಗಿ ಸಕ್ಕರೆ ಅಂಶ ಹೆಚ್ಚಾಗುತ್ತ ಹೋಗುತ್ತದೆ. ॐ

ಮುಂದುವರೆಯುವುದು ............

# ರಕ್ಷಾ ಬಂಧನ



ಭಾರತೀಯರು ಶ್ರಾವಣ ಮಾಸದ ಹುಣ್ಣಿಮೆಯ ದಿನದಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ವರ್ಷ ಆಗಸ್ಟ್ 15 ರಂದು ರಕ್ಷಾಬಂಧನವನ್ನು ಆಚರಿಸಲಾಗುತ್ತಿದೆ. ಆ ದಿನ ಸಹೋದರಿಯರು ತಮ್ಮ ಸಹೋದರನ ಮುಂಗೈಗೆ ರಾಖಿಯನ್ನು ಕಟ್ಟಿ ಆರತಿ ಮಾಡಿ, ಸೋದರನ ಆಶೀರ್ವಾದವನ್ನು ಬೇಡುತ್ತಾರೆ. ತಂಗಿಯ ರಕ್ಷಣೆ ಅಣ್ಣನಿಂದ, ಅಣ್ಣನ ರಕ್ಷಣೆ ತಂಗಿಯಿಂದ ಎಂಬ ಪರಸ್ಪರ ಭ್ರಾತೃತ್ವದ ಭಾವನೆಯನ್ನು ದಟ್ಟ ಗೊಳಿಸುವ ಹಬ್ಬ ಇದಾಗಿದೆ.

ದಂತಕತೆಗಳ ಪ್ರಕಾರ ಅಲೆಕ್ಸಾಂಡರನು ಭಾರತದ ಮೇಲೆ ದಂಡೆತ್ತಿ ಬಂದಾಗ ಅವನನ್ನು ಧೈರ್ಯದಿಂದ ಎದುರಿಸಿದವನು ಪೋರಸ್. ಆಗ ಅವರಿಬ್ಬರ ನಡುವೆ ಯುದ್ಧ ಆರಂಭಗೊಂಡಿತು. ಇದೇ ಸಮಯದಲ್ಲಿ ಅಲೆಕ್ಸಾಂಡರನ ಪತ್ನಿ ರೊಕ್ಸಾನಳು ಪೋರಸ್‌ಗೆ ಒಂದು ಪವಿತ್ರ ದಾರವನ್ನು (ರಾಖಿ) ಕಳುಹಿಸಿದಳು. ಅದರ ಜೊತೆಗೆ ಒಂದು ಮನವಿ ಸಹ ಇತ್ತು. ತನ್ನ ಪತಿಯನ್ನು ಕೊಲ್ಲದಿರುವಂತೆ ಕೇಳಿಕೊಂಡ ಮನವಿ ಅದಾಗಿತ್ತು. ಮುಂದೆ ನಡೆದ ಯುದ್ಧದಲ್ಲಿ ಪೋರಸ್ ಅಲೆಕ್ಸಾಂಡರನನ್ನು ಕೊಲ್ಲದೆ ಉಳಿಸಿದನು. ಇದಕ್ಕೆ ಕಾರಣ ಆತನ ಕೈಯಲ್ಲಿ ಆತ ಕಟ್ಟಿಕೊಂಡಿದ್ದ ರಾಖಿ ಅವನನ್ನು ತಡೆದು ನಿಲ್ಲಿಸಿತ್ತು.

ಮತ್ತೊಂದು ಘಟನೆಯಲ್ಲಿ ಚಿತ್ತೂರಿನ ರಾಣಿ ಕರ್ಣಾವತಿಯು ಗಂಡನನ್ನು ಕಳೆದುಕೊಂಡು ವೈಧವ್ಯದ ಜೀವನ ನಡೆಸುತ್ತಿದ್ದಳು. ಆಗ ಆಕೆಯು ಚಕ್ರವರ್ತಿ ಹುಮಾಯುನನಿಗೆ ರಾಖಿಯನ್ನು ಕಳುಹಿಸಿದಳು. ಇದಕ್ಕೆ ಕಾರಣ ಚಕ್ರವರ್ತಿ ಬಹದ್ದೂರ್ ಷಾನು ಈಕೆಯ ರಾಜ್ಯದ ಮೇಲೆ ದಂಡೆತ್ತಿ ಬರುವ ನಿರ್ಧಾರಕ್ಕೆ ಬಂದಿದ್ದನು. ಆಗ ಆಕೆಯು ಹುಮಾಯೂನನ ಸಹಾಯವನ್ನು ಬಯಸಿ ರಾಖಿಯನ್ನು ಕಳುಹಿಸಿದ್ದಳು. ಇದನ್ನು ಮುಟ್ಟುವ ಮೂಲಕ ಸ್ವೀಕರಿಸಿದ ಹುಮಾಯೂನನು ತನ್ನ ಸೇನೆಯನ್ನು ರಾಣಿ ಕರ್ಣಾವತಿಯ ಸಹಾಯಕ್ಕೆ ಧಾವಿಸುವಂತೆ ಸೂಚಿಸಿದನು. ಆದರೆ ಸೈನ್ಯವು ಅಲ್ಲಿಗೆ ತಲುಪಲು ತಡವಾಯಿತು. ಇದೇ ವೇಳೆಗೆ ರಾಣಿ ಕರ್ಣಾವತಿಯು ಇತರೆ ಹೆಂಗಸರೊಂದಿಗೆ ಕೂಡಿ, ತನ್ನ ಮಾನ ರಕ್ಷಣೆಗಾಗಿ ಜೌಹರ್ ಮಾಡಿಕೊಳ್ಳುವ ಮೂಲಕ ಪ್ರಾಣ ತ್ಯಾಗ ಮಾಡಿದ್ದಳು. ಮುಂದೆ ಬಹದ್ದೂರ್ ಷಾನನ್ನು ಹುಮಾಯೂನ್ ಹೊರಗೆ ಹಾಕಿ, ಕರ್ಣಾವತಿಯ ಮಗ ವಿಕ್ರಮಜೀತನನ್ನು ಸಿಂಹಾಸನದಲ್ಲಿ ಕೂರಿಸಿದನು.

**ರಕ್ಷಾಬಂಧನದ ಮಹತ್ವ, ಪ್ರಾಮುಖ್ಯತೆ**

ರಕ್ಷಾಬಂಧನಕ್ಕೆ ಭಾರತದಲ್ಲಿ ಹೆಚ್ಚು ಮಹತ್ವವಿದೆ. ಇದನ್ನು ಹಬ್ಬದಂತೆ ಆಚರಿಸಲಾಗುತ್ತದೆ. ಸಹೋದರ – ಸಹೋದರಿಯರ ನಡುವಿನ ಪ್ರೀತಿಗೆ ಈ ದಿನ ಸಮರ್ಪಣೆಯಾಗಿದೆ. ಹಿಂದೂ ಧರ್ಮದಲ್ಲಿ ರಕ್ಷಾ ಬಂಧನಕ್ಕೆ ಹೆಚ್ಚು ಪ್ರಾಮುಖ್ಯತೆ ಇದೆ.

ರಕ್ಷಾ ಬಂಧನ ರಕ್ಷೆ (ರಕ್ಷಣೆ) ಹಾಗೂ ಬಂಧನ (ಸಂಬಂಧ) ಎಂಬ ಎರಡು ಪದಗಳಿಂದ ಕೂಡಿದೆ. ಪ್ರಸ್ತುತ, ಈ ಹಬ್ಬವು ಸಹೋದರ–ಸಹೋದರಿಯರ ನಡುವಿನ ಪ್ರೀತಿ ಮತ್ತು ಬಂಧದ ಸಮಾನಾರ್ಥಕವಾಗಿದೆ ಮತ್ತು ಇದು ಸಹೋದರಿ ಮತ್ತು ಸಹೋದರರ ನಡುವಿನ ಪ್ರೀತಿಯನ್ನು ಬಲಪಡಿಸುವ ಮತ್ತು ಪುನರುಚ್ಚರಿಸುವ ಉತ್ಸವವಾಗಿದೆ ಎಂದು ಹೇಳಬಹುದು. ಒಂದು ಕಡೆ, ಸಹೋದರನು ತನ್ನ ಸಹೋದರಿಯನ್ನು ನೋಡಿಕೊಳ್ಳುವುದಾಗಿ ಮತ್ತು ತನ್ನ ಜೀವನಪರ್ಯಂತ ಅವಳನ್ನು ರಕ್ಷಿಸುವುದಾಗಿ ಭರವಸೆ ನೀಡುತ್ತಾನೆ. ಮತ್ತೊಂದೆಡೆ, ಸಹೋದರಿ ತನ್ನ ಸಹೋದರನ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸುತ್ತಾಳೆ.

ಈ ದಿನ, ಸಹೋದರಿ ತನ್ನ ಸಹೋದರರ ಮಣಿಕಟ್ಟಿನ ಮೇಲೆ ಕಟ್ಟುವ ರೇಷ್ಮೆ ದಾರವು ಕೇವಲ ಒಂದು ದಾರವಲ್ಲ. ಅದು ಇಬ್ಬರ ನಡುವಿನ ಶುದ್ಧ, ಪವಿತ್ರ ಮತ್ತು ನಿರಂತರ ಪ್ರೀತಿಯ ಗುರುತು, ಜೊತೆಗೆ ಶಾಶ್ವತ ರಕ್ಷಣೆಗಾಗಿ ಮಂತ್ರದೊಂದಿಗೆ ಬೆರೆತಿದೆ. ಸಹೋದರಿ ಮದುವೆಯಾದಾಗಲೂ, ಸಹೋದರಿಯರ ಮನೆಗೆ ಭೇಟಿ ನೀಡಿ ಮತ್ತು ಆಕೆಯಿಂದ ರಾಖಿಯನ್ನು ಕಟ್ಟಿಸಿಕೊಳ್ಳುವುದನ್ನು ಮರೆಯುವುದಿಲ್ಲ.

ರಕ್ಷಾ ಬಂಧನಕ್ಕೆ ಪ್ರತಿ ಹಿಂದೂ ಮನೆಗಳಲ್ಲಿ ಹಬ್ಬದ ತಿಂಗಳು ಬರುವ ಮುನ್ನವೇ ತಯಾರಿಗಳು ಆರಂಭವಾಗಿರುತ್ತದೆ. ಸಹೋದರನಿಗೆ ಕಟ್ಟಲು ರಾಖಿಯನ್ನು ಆಯ್ಕೆ ಮಾಡುವ ವಿಚಾರದಲ್ಲೂ ಸಹೋದರಿ ಖುಷಿ ಖುಷಿಯಾಗಿ ಇರುತ್ತಾರೆ. ರಕ್ಷಾ ಬಂಧನದ ಹಿಂದಿನ ದಿನ ರಾತ್ರಿಯೇ ಸಿಹಿ ತಿಂಡಿಗಳನ್ನು ತಯಾರು ಮಾಡಲಾಗುತ್ತಿದೆ.

ಇನ್ನು, ರಕ್ಷಾ ಬಂಧನದ ದಿನ ಕುಟುಂಬದ ಪ್ರತಿಯೊಬ್ಬ ಸದಸ್ಯರು ಬೆಳಗ್ಗೆ ಬೇಗ ಎದ್ದು ಆಚರಣೆಗಳನ್ನು ಆರಂಭಿಸುತ್ತಾರೆ. 'ರೋಲಿ', ಭತ್ತದ ಧಾನ್ಯಗಳು, 'ದಿಯಾ', ಸಿಹಿತಿಂಡಿಗಳು ಮತ್ತು ರಾಖಿಗಳಿಂದ ಅಲಂಕರಿಸಲಾಗುತ್ತದೆ. ಮನೆಯಲ್ಲಿ ಒಬ್ಬಳೇ ಹೆಣ್ಣು ಮಗಳಿದ್ದರೆ ಅಥವಾ ಸಹೋದರನನ್ನು ಹೊಂದಿರದಿದ್ದರೆ ಸಾಮಾನ್ಯವಾಗಿ ಸೋದರ ಸಂಬಂಧಿ ಅಥವಾ ಅವಳು ತನ್ನ ಸಹೋದರ ಎಂದು ಹೇಳಿಕೊಳ್ಳುವ ಯಾರೊಂದಿಗಾದರೂ ಆಚರಣೆಗಳನ್ನು ಮಾಡುತ್ತಾರೆ. ಈ ಹಬ್ಬವು ಒಡಹುಟ್ಟಿದವರು ಒಟ್ಟಿಗೆ ಬೆಳೆಯುವ ಮಹತ್ವವನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ॐ


**ಸಂಪ್ರೀತಿ ಸುಘೋಷ**



ಸಮುದ್ರದಲ್ಲಿ ಸ್ನಾನಕ್ಕೆಂದೇ ಬೇರೆ ತೆರೆಗಳಿರುವುದಿಲ್ಲ, ಬಂದ ತೆರೆಗಳಿಗೆ ತಲೆಯೊಡ್ಡಿ ಸ್ನಾನ ಮುಗಿಸಬೇಕು. ಹಾಗೆಯೇ ಬದುಕಿನಲ್ಲಿ ಖುಷಿಗೆಂದೇ ಬೇರೆ ದಿನಗಳಿರುವುದಿಲ್ಲ, ಎಲ್ಲಾ ದಿನಗಳಲ್ಲೂ ಖುಷಿ ಪಡಲು ಸಾಧ್ಯವಿದೆ. ಅದನ್ನು ಅನುಭವಿಸುವ ಮನಸ್ಸು ನಮ್ಮದಾಗಿರಬೇಕು

**ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ**

# ಸಂಸ್ಕೃತ ಭಾಷೆ



ಸಂಸ್ಕೃತ ಭಾಷೆಯನ್ನು ಅತ್ಯಂತ ಹಳೆಯ ಭಾಷೆಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ ಮತ್ತು ಎಲ್ಲಾ ಭಾಷೆಗಳ ತಾಯಿ ಎಂದು ಕರೆಯಲಾಗುತ್ತದೆ. ಈ ವರ್ಷ, ವಿಶ್ವ ಸಂಸ್ಕೃತ ದಿನವನ್ನು ಇಂದು ಅಂದರೆ ಆಗಸ್ಟ್ 31, 2023 ರಂದು ಆಚರಿಸಲಾಗುತ್ತಿದೆ. ಸಂಸ್ಕೃತ ಭಾಷೆ ಸುಮಾರು 3500 ವರ್ಷಗಳ ಹಿಂದೆ ಭಾರತದಲ್ಲಿ ಹುಟ್ಟಿಕೊಂಡಿದೆ ಎಂದು ನಂಬಲಾಗಿದೆ. ಮೊದಲ ವಿಶ್ವ ಸಂಸ್ಕೃತ ದಿನವನ್ನು 1969 ರಂದು ಆಚರಿಸಲಾಯಿತು.

ಭಾರತದ ಅತ್ಯಂತ ಪುರಾತನ ಭಾಷೆಯಾದ ಸಂಸ್ಕೃತದ ಮಹತ್ವ ಸಾರುವ ಈ ದಿನವು ಪ್ರತಿವರ್ಷ ಒಂದೇ ದಿನಾಂಕದಂದು ಬರುವುದಿಲ್ಲ.

ಸಂಸ್ಕೃತವು ಭಾರತದ ಅತ್ಯಂತ ಹಳೆಯ ಭಾಷೆ. ಈ ಭಾಷೆಯಡಿ ಹಲವು ಭಾಷೆಗಳು ಹುಟ್ಟಿಕೊಂಡಿವೆ. ಸಂಸ್ಕೃತವು ಉತ್ತರಾಖಂಡ ರಾಜ್ಯದ ಅಧಿಕೃತ ಭಾಷೆಯೂ ಹೌದು. ವೇದ ಕಾಲದಲ್ಲಿ ಸಂಸ್ಕೃತ ಉತ್ತುಂಗದಲ್ಲಿತ್ತು. ಭಾರತದ ಪ್ರಾಚೀನ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಲಾಗಿದೆ. ನಾವು ಬಳಸುವ ಕನ್ನಡದಲ್ಲಿ ಸಂಸ್ಕೃತ ಪದಗಳು ಹೇರಳವಾಗಿವೆ. ಆದರೆ, ಈಗ ಜಗತ್ತಿನಲ್ಲಿ ಸಂಸ್ಕೃತವು ಕಡಿಮೆ ಮಾಡುವ ಭಾಷೆಯಾಗಿದೆ.

ಭಾರತದಲ್ಲಿ ಸಂಸ್ಕೃತ ದಿನವನ್ನು ಶ್ರಾವಣ ಮಾಸದ ಹುಣ್ಣಿಮೆಯಂದು (ಪೂರ್ಣ ಚಂದಿರ) ಆಚರಿಸಲಾಗುತ್ತದೆ. ಭಾರತದ ಪುರಾತನ ಭಾಷೆಯಾದ ಸಂಸ್ಕೃತದ ಕುರಿತು ಜಗತ್ತಿಗೆ ತಿಳಿಸುವ ಉದ್ದೇಶದಿಂದ ವಿಶ್ವ ಸಂಸ್ಕೃತ ದಿನ ಆಚರಿಸಲಾಗುತ್ತದೆ. ಈ ಭಾಷೆಯ ಪ್ರಚಾರ, ಈ ಭಾಷೆಯ ಹಿರಿಮೆಯ ಪ್ರಚಾರವೂ ಈ ದಿನದ ಉದ್ದೇಶ. ಜನ ಸಾಮಾನ್ಯರಿಗೆ ಸಂಸ್ಕೃತ ಭಾಷೆಯನ್ನು ಪರಿಚಯಿಸುವುದರ ಜತೆಗೆ ನಮ್ಮ ಮುಂದಿನ ಪೀಳಿಗೆಗೂ ಈ ಭಾಷೆಯನ್ನು ಉಳಿಸಬೇಕು. ಈ ಭಾಷೆಯ ಜ್ಞಾನವನ್ನು ಪಸರಿಸಬೇಕು ಎಂಬ ಉದ್ದೇಶದಿಂದ ವಿಶ್ವ ಸಂಸ್ಕೃತ ದಿನವನ್ನು ಆಚರಿಸಲಾಗುತ್ತದೆ. ಸಂಸ್ಕೃತ ಭಾರತದ ಪರಂಪರೆಯ ಸಂಕೇತವಾಗಿದೆ. ಸಂಸ್ಕೃತ ಕಲಿಯುವ ಮೂಲಕ ಪೂರ್ವಕಾಲದ ಹಲವು ರಹಸ್ಯಗಳು, ಧಾರ್ಮಿಕ, ಸಾಂಸ್ಕೃತಿಕ ವಿವರಗಳನ್ನೂ ಪಡೆದುಕೊಳ್ಳಲು ಸಾಧ್ಯವಿದೆ. ಸಂಸ್ಕೃತದಲ್ಲಿ ವಿಜ್ಞಾನ, ಧರ್ಮ ಸೇರಿದಂತೆ ಹಲವು ಮಹತ್ವದ ಕೃತಿಗಳಿವೆ. ನಾವು ಈಗ ಮಾಡುತ್ತಿರುವ ಸಂಶೋಧನೆಗಳನ್ನು ನಮ್ಮ ಪೂರ್ವಜರು ಬಹುಕಾಲದ ಹಿಂದೆಯೇ ಮಾಡಿದ್ದಾರೆ ಎನ್ನುವುದಕ್ಕೂ ದಾಖಲೆಗಳು ದೊರಕುತ್ತವೆ.

**ಆಧುನಿಕ ಯುಗದಲ್ಲಿ ಸಂಸ್ಕೃತ**

1783 ರಲ್ಲಿ ಸರ್ ವಿಲಿಯಂ ಜಾನ್ ಬ್ರಿಟಿಷ್ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಕೋಲ್ಕೋತ್ತಾಕ್ಕೆ ಬಂದರು. ಸರ್ ವಿಲಿಯಂ ಜಾನ್ ಅವರು ಇಂಗ್ಲಿಷ್ ಭಾಷಾ ಶಾಸ್ತ್ರಜ್ಞರು, ಸಂಸ್ಕೃತದಲ್ಲಿ ವಿದ್ವಾಂಸರು ಮತ್ತು ಏಷ್ಯನ್ ಸೊಸೈಟಿಯ ಸ್ಥಾಪಕರಾಗಿದ್ದಾರೆ. ಕಾಳಿದಾಸನು ರಚಿಸಿದ 'ಅಭಿಜ್ಞಾನ ಶಕುಂತಲಾ' ಸೇರಿದಂತೆ ಹಲವು ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಇದರ ಹೊರತಾಗಿ, ಕವಿ ಜಯದೇವ ರಚಿಸಿದ 'ಗೀತ ಗೋವಿಂದ' ಮತ್ತು ಮನು ಕಾನೂನು 'ಮನುಸ್ಮೃತಿ ಕೂಡ ಇಂಗ್ಲಿಷ್ ಭಾಷೆಗೆ ಪರಿವರ್ತನೆಗೊಂಡಿತು. 1785 ರಲ್ಲಿ, ಇನ್ನೊಬ್ಬ ವಿದ್ವಾಂಸ ಸರ್ ಚಾರ್ಲ್ಸ್ ವಿಲ್ಕಿನ್ಸ್ ಸಂಸ್ಕೃತದಿಂದ ಇಂಗ್ಲಿಷ್‌ಗೆ 'ಶ್ರೀಮದ್ ಭಗವದ್ಗೀತೆ'ಯನ್ನು ಅನುವಾದಿಸಿದ್ದಾರೆ. ಇಂಗ್ಲಿಷ್‌ಗೆ ಮಾತ್ರವಲ್ಲದೆ ಜರ್ಮನ್ ಸೇರಿದಂತೆ ಜಗತ್ತಿನ ವಿವಿಧ ಭಾಷೆಗಳಿಗೆ ಸಂಸ್ಕೃತ ಕೃತಿಗಳನ್ನು ಅನುವಾದಿಸಲಾಗಿದೆ.

**ಸಂಸ್ಕೃತ ದಿನದ ಆಚರಣೆ ಹೇಗೆ?**

ಶಾಲಾ ಕಾಲೇಜುಗಳಲ್ಲಿ ಸರಕಾರವು ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತದೆ. ಪ್ರಬಂಧ, ಪದ್ಯ, ಚರ್ಚೆ, ಗಾಯನ, ಚಿತ್ರಕಲೆ ಸ್ಪರ್ಧೆಗಳು ಸಂಸ್ಕೃತ ಭಾಷೆಯಲ್ಲಿ ನಡೆಯುತ್ತವೆ. ವಿಶೇಷವಾಗಿ ಸಂಸ್ಕೃತ ಅಧ್ಯಯನ ಕೇಂದ್ರಗಳಲ್ಲಿ ಸಂಸ್ಕೃತ ದಿನವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಭಾರತ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಸಂಸ್ಕೃತ ಭಾಷೆಗೆ ಮಹತ್ವವಿದ್ದು, ವಿದೇಶಿ ವಿದ್ಯಾರ್ಥಿಗಳು ಈ ಭಾಷೆಯನ್ನು ಕಲಿಯುತ್ತಿದ್ದಾರೆ. ಹೀಗಾಗಿ, ಇಂದು ಭಾರತ ಮಾತ್ರವಲ್ಲದೆ ಜಗತ್ತಿನ ವಿವಿಧೆಡೆ ಸಂಸ್ಕೃತ ದಿನವನ್ನು ಆಚರಿಸಲಾಗುತ್ತಿದೆ.

# ರಾಷ್ಟ್ರೀಯ ಕ್ರೀಡಾ ದಿನ



ಪ್ರತಿ ವರ್ಷ ಆಗಸ್ಟ್ 29 ರಂದು, ಭಾರತವು ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸುತ್ತದೆ, ಮೇಜರ್ ಧ್ಯಾನ್ ಚಂದ್ ಅವರ ಜನ್ಮದಿನದ ಸ್ಮರಣಾರ್ಥವಾಗಿ, ಇತಿಹಾಸದಲ್ಲಿ ಅತ್ಯುತ್ತಮವಾದ ಫೀಲ್ಡ್ ಹಾಕಿ ಆಟಗಾರ ಎಂದು ಪರಿಗಣಿಸಲಾಗಿದೆ. ಈ ದಿನದ ಮಾನ್ಯತೆಯನ್ನು 2012 ರಲ್ಲಿ ಸ್ಥಾಪಿಸಲಾಯಿತು, ಉದ್ಘಾಟನಾ ಆಚರಣೆಯು ಆಗಸ್ಟ್ 29, 2012 ರಂದು ನಡೆಸಲಾಯಿತು.

ಇಂದು ಆಗಸ್ಟ್ 29, ದೇಶಾದ್ಯಂತ ಸಂಭ್ರಮ ಮನೆಮಾಡಿದೆ. ರಾಷ್ಟ್ರ ಕಂಡ ಸರ್ವಶ್ರೇಷ್ಠ ಕ್ರೀಡಾಪಟುಗಳಲ್ಲಿ ಒಬ್ಬರಾಗಿರುವ ಹಾಕಿ ದಿಗ್ಗಜ ಮೇಜರ್ ಧ್ಯಾನ್‌ಚಂದ್ ಅವರ ಹುಟ್ಟಿದ ದಿನವನ್ನು ರಾಷ್ಟ್ರೀಯ ಕ್ರೀಡಾದಿನವನ್ನಾಗಿ ಆಚರಿಸಲಾಗುತ್ತಿದ್ದು ಈ ಮೂಲಕ ದಿಗ್ಗಜ ಕ್ರೀಡಾಪಟುವಿನ ನೆನಪಿನಲ್ಲಿ ಕ್ರೀಡಾ ಕ್ಷೇತ್ರಕ್ಕೆ ಮತ್ತಷ್ಟು ಉತ್ತೇಜನ ನೀಡಲಾಗುತ್ತಿದೆ.

ಭಾರತ ಕ್ರೀಡಾಕ್ಷೇತ್ರದ ಕೆಲವೇ ಕ್ರೀಡೆಗಳಲ್ಲಿ ಮಾತ್ರವೇ ಹೇಳಿಕೊಳ್ಳುವಂತಾ ಸಾಧನೆ ಮಾಡಿದೆ. ಕ್ರೀಡಾ ವಿಭಾಗಕ್ಕೆ ದೊಡ್ಡ ಮಟ್ಟದ ಬೆಂಬಲ ಭಾರತದಲ್ಲಿ ಇಲ್ಲದೇ ಇದ್ದಿದ್ದು ಇದಕ್ಕೆ ಕಾರಣ. ಆದರೆ ಕಳೆದ ಒಂದೆರಡು ದಶಕಗಳಿಂದ ಇದು ಬದಲಾಗುತ್ತಿದೆ. ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸಾಕಷ್ಟು ಭರವಸೆಗಳು ಮೂಡುತ್ತಿದೆ. ಸ್ಥಳೀಯ ಮಟ್ಟದಿಂದಲೇ ಕ್ರೀಡೆಗಳಿಗೆ ಪೂರಕವಾದ ವಾತಾವರಣಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿದೆ. ಇದಕ್ಕೆ ಮತ್ತಷ್ಟು ಉತ್ತೇಜನ ನೀಡುವ ದೃಷ್ಟಿಯಿಂದ ಈ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ.

ದಿಗ್ಗಜ ಹಾಕಿ ಪಟು ಮೇಜರ್ ಧ್ಯಾನ್‌ಚಂದ್ ಅವರ ಹುಟ್ಟಿದ ದಿನವನ್ನು ರಾಷ್ಟ್ರೀಯ ಕ್ರೀಡಾ ದಿನ ಎಂದು ಘೋಷಣೆ ಮಾಡಲಾಗಿದೆ. 2012 ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಕ್ರೀಡಾದಿನವನ್ನು ಆಚರಿಸಲಾಯಿತು. ಅದೇ ವರ್ಷ ರಾಷ್ಟ್ರೀಯ ಕ್ರೀಡಾದಿನವನ್ನು ರಾಷ್ಟ್ರೀಯ ದಿನಗಳ ಪಟ್ಟಿಗೆ ಕೂಡ ಸೇರಿಸಲಾಗಿತ್ತು.

ಹಾಕಿ ದಿಗ್ಗಜ ಮೇಜರ್ ಧ್ಯಾನ್ ಚಂದ್ ಆಗಸ್ಟ್ 29, 1905 ರಲ್ಲಿ ಅಹ್ಮದಾಬಾದ್‌ನಲ್ಲಿ ಜನಿಸಿದರು. ವಿಶ್ವಕಂಡ ಅಪರೂಪದ ಅತ್ಯುತ್ತಮ ಹಾಕಿ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಭೂಪಟದಲ್ಲಿ ಮೊದಲ ಬಾರಿಗೆ ಭಾರತ ಮಿನುಗುವಂತೆ ಮಾಡಿದ್ದರು. ಸ್ವಾತಂತ್ರ್ಯ ಪೂರ್ವದಲ್ಲೇ ಭಾರತಕ್ಕೆ ಒಂದಲ್ಲ ಎರಡಲ್ಲ ಮೂರು ಒಲಿಂಪಿಕ್ಸ್ ಚಿನ್ನದ ಪದಕವನ್ನು ಗೆದ್ದುಕೊಟ್ಟಿದ್ದರು.

ಧ್ಯಾನ್‌ಚಂದ್ ಅವರ ಅಮೋಘ ಆಟದಿಂದಾಗಿ ಭಾರತ 1928 ರ ಹ್ಯಾಮರ್‌ಡ್ಯಾಮ್, 1932 ರ ಲಾಸ್ ಏಂಜಲೀಸ್ ಮತ್ತು 1936 ರ ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಭಾರತವು ಸತತ ಮೂರು ಒಲಿಂಪಿಕ್ ಹಾಕಿ ಚಿನ್ನದ ಪದಕ ಗೆದ್ದು ಬೀಗಿತ್ತು. 1928 ರ ಫೈನಲ್‌ನಲ್ಲಿ ಭಾರತ ಆತಿಥೇಯ ನೆದರ್ಲೆಂಡ್ಸ್ ತಂಡವನ್ನು 3–0 ಅಂತರದಿಂದ ಸೋಲಿಸಿ ಈ ಚಿನ್ನದ ಪದಕದ ಸಾಧನೆ ಮಾಡಿದ್ದರೆ 1932 ರ ಚಿನ್ನದ ಪದಕ ಪಂದ್ಯದಲ್ಲಿ ಯುನೈಟೆಡ್ ಸ್ಟೇಟ್ಸ್ ಅನ್ನು ಊಹಿಸಲೂ ಸಾಧ್ಯವಾಗದಂತೆ 24–1 ಅಂತರದಿಂದ ಸೋಲಿಸಿ ಪದಕ ಗೆದ್ದಿತ್ತು. ಇನ್ನು 1936 ರಲ್ಲಿ ಜರ್ಮನಿ ವಿರುದ್ಧ 8–1 ಗೋಲುಗಳಿಂದ ಫೈನಲ್‌ನಲ್ಲಿ ಮಣಿಸಿತು. ಒಟ್ಟಾರೆಯಾಗಿ, ಧ್ಯಾನ್ ಚಂದ್ 12 ಒಲಿಂಪಿಕ್ ಪಂದ್ಯಗಳನ್ನು ಆಡಿ 33 ಗೋಲುಗಳನ್ನು ಗಳಿಸಿದರು.

ಈ ದಿನದಂದು, ವಿವಿಧ ಕ್ರೀಡಾ ಪಟುಗಳು ಸಾಮಾಜಿಕ ಜಾಲತಾಣಗಳಲ್ಲಿ ರಾಷ್ಟ್ರೀಯ ಕ್ರೀಡಾ ದಿನದ ಸಂದರ್ಭದಲ್ಲಿ ಸಂದೇಶಗಳನ್ನು ನೀಡಿದ್ದಾರೆ. ಕ್ರೀಡಾಲೋಕದ ಹಲವು ಸಾಧಕರು ಆಡಲು ವಯಸ್ಸು ಅಡ್ಡಿಯಿಲ್ಲ, ಕ್ರೀಡೆಗಳ ಮೂಲಕ ಭಾರತವನ್ನು ಸದೃಢ ರಾಷ್ಟ್ರವನ್ನಾಗಿ ಮಾಡಲು ಕರೆ ನೀಡಿದ್ದಾರೆ.

ರಾಷ್ಟ್ರೀಯ ಕ್ರೀಡಾ ದಿನ ಆಚರಣೆಯ ಮುಖ್ಯ ಉದ್ದೇಶ ಕ್ರೀಡೆಯ ಮಹತ್ವದ ಬಗ್ಗೆ ಜನರಲ್ಲಿ ಜಾಗ್ರತೆಯನ್ನುಂಟು ಮಾಡುವುದಾಗಿದೆ. ಅದರ ಜೊತೆಗೆ ದೈನಂದಿನ ಜೀವನದಲ್ಲಿ ದೈಹಿಕವಾಗಿ ಸಕ್ರಿಯವಾಗಿರುವಂತೆ ಪ್ರೇರೆಪಿಸುವುದು ಕೂಡ ಇದರ ಗುರಿ. 2012 ರಲ್ಲಿ ಭಾರತದಲ್ಲಿ ರಾಷ್ಟ್ರೀಯ ಕ್ರೀಡಾ ದಿನ ಉದ್ಘಾಟನಾ ಆಚರಣೆಯ ನಂತರ, ವಿವಿಧ ಕ್ರೀಡೆ–ಸಂಬಂಧಿತ ಯೋಜನೆಗಳಿಗೆ ಮತ್ತಷ್ಟು ಉತ್ತೇಜನ ನೀಡಲು ಆರಂಭಿಸಿತು. ಇದರ ಭಾಗವಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು 2018 ರಲ್ಲಿ ಖೇಲೋ ಇಂಡಿಯಾ ಅಭಿಯಾನವನ್ನು ಘೋಷಿಸಿದರು. ॐ

**ಸಮೃದ್ಧಿ ಸುಜ್ಞಾನ**

ನಿಮ್ಮ ಕನಸುಗಳನ್ನು ಬೆನ್ನಟ್ಟುವ ಧೈರ್ಯ ನಿಮಗಿದ್ದರೆ
ನಿಮ್ಮ ಎಲ್ಲಾ ಕನಸುಗಳು ನನಸಾಗಬಹುದು.



# ಕ್ಷೀರ ಸಾಗರ ಮಂಥನದ ಕಥೆಯನ್ನು ನೀವೆಲ್ಲರೂ ಕೇಳಿಯೇ ಇರುತ್ತೀರಿ

ಅಮೃತಕ್ಕಾಗಿ ದೇವದಾನವರು ಕ್ಷೀರಸಾಗರವನ್ನು ಮಥಿಸಲು (ಕಡೆಯಲು) ಅದರಿಂದ ಅನೇಕಾನೇಕ ದಿವ್ಯವಾದ ವಸ್ತುಗಳು – ಕಲ್ಪವೃಕ್ಷ, ಕಾಮಧೇನು, ಐರಾವತ ಇತ್ಯಾದಿ ಮೇಲೆ ಬಂದವು. ದೇವದಾನವರು ತಮಗೆ ಬೇಕಾದವುಗಳನ್ನು ಪಡೆಯುತ್ತಾರೆ. ಲಕ್ಷ್ಮಿಯು ಕ್ಷೀರಸಾಗರದಿಂದ ಉದಿಸಿ ಬರಲು ನಾರಾಯಣನು ಅವಳನ್ನು ವರಿಸುತ್ತಾನೆ.

ನಂತರ ಇದ್ದಕ್ಕಿದ್ದಂತೆ ಭಯಂಕರ ಆಲಾಹಲ (ವಿಷ)ವು ಬರಲು ಎಲ್ಲರೂ ಕಂಗಾಲಾಗಿ ಹೋಗುತ್ತಾರೆ. ಯಾರಿಂದಲೂ ಆ ವಿಷವನ್ನು ಸಹಿಸಲು ಅಥವ ತಡೆಯಲು ಸಾಧ್ಯವಾಗುವುದಿಲ್ಲ. ನಾರಾಯಣನೂ ತನ್ನಿಂದ ಸಾದ್ಯವಿಲ್ಲ ಎನಲು ಎಲ್ಲರೂ ಶಿವನಲ್ಲಿ ಮೊರೆ ಇಡಲು, ಶಿವನು ಆ ಆಲಾಹಲವನ್ನು ಕುಡಿದು ಮೃತ್ಯುಂಜಯನಾಗುತ್ತಾನೆ. ಈ ಘಟನೆಯ ಹಿಂದೆ ಒಂದು ಅಪೂರ್ವ ತತ್ವಾರ್ಥ ಅಡಗಿದೆ ಅದೇನೆಂದರೆ –

ನಮ್ಮ ಮನಸ್ಸೇ – ಕ್ಷೀರಸಾಗರ, ಚ್ಚಾಶಕ್ತಿ – ಮೇರುಪರ್ವತ, ಪ್ರಯತ್ನವೇ – ಹಗ್ಗ, ಇಂದ್ರಿಯಗಳ ಬಯಕೆಗಳೇ – ದೇವಾಸುರರು (ಉತ್ತಮ ಬಯಕೆಗಳು ದೇವತೆಗಳಾದರೆ ದುಷ್ಟ ಬಯಕೆಗಳು ಅಸುರರು), ಮಥನ – ಕ್ರಿಯೆ, ಕ್ಷೀರಸಾಗರ ಮಥನ ಕಾಲದಲ್ಲಿ ಬಂದ ದಿವ್ಯ ವಸ್ತುಗಳು – ಬಯಕೆಗಳ ಈಡೇರುವಿಕೆ, ವಿಷ – ಮೃತ್ಯು, ಅಮೃತ – ಬಿಡುಗಡೆ ಅಥವ ಹುಟ್ಟು ಸಾವುಗಳಿಂದ ಮುಕ್ತಿ ಎಂದರ್ಥ.

ಕ್ಷೀರಸಾಗರ ಮಥನದ ಉದ್ದೇಶ ಅಮೃತ ಆದರೆ ಮಥನದ ಕಾಲದಲ್ಲಿ ಬಂದ ಭೋಗವಸ್ತುಗಳ ಪಡೆಯುವಿಕೆಯಲ್ಲೇ ಮಗ್ನರಾಗಿ ಮೂಲ ಉದ್ದೇಶ ಮರೆತಂತೆ ನಾವು ನಮ್ಮ ಮನಸ್ಸಿನ ಶಕ್ತಿಯನ್ನು ಕೇವಲ ಭೋಗವಸ್ತುಗಳನ್ನು ಪಡೆಯಲು ವ್ಯಯಿಸುತ್ತಿರುತ್ತೇವೆ. ಆತ್ಮವನ್ನು ತಿಳಿಯುವ ಪ್ರಯತ್ನವನ್ನೇ ಮರೆತಿದ್ದೇವೆ. ಆದರೆ ಯಾರು ಬಯಕೆಗಳನ್ನು ತ್ಯಜಿಸಿ ನಿತ್ಯ ತೃಪ್ತರಾಗಿ ಆತ್ಮದಲ್ಲಿ ನೆಲೆನಿಲ್ಲುವರೋ ಅವರು ಮಾತ್ರ ಮೃತ್ಯುವನ್ನು ಮೀರುತ್ತಾರೆ ಮತ್ತು ಅಮೃತತ್ವವನ್ನು ಹೊಂದುವರು. ॐ


**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ – 562 120


ದೂರವಾಣಿ : 8971608213. ಇ–ಮೇಲ್ : sampreethisamruddhi@gmail.com

**ಪತ್ರಿಕೆಯ ಚಂದಾವಿವರ**

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213

# ರಾಷ್ಟ್ರೀಯ ಕೈಮಗ್ಗ ದಿನ



ರಾಷ್ಟ್ರೀಯ ಕೈಮಗ್ಗ ದಿನವನ್ನು ಆಗಸ್ಟ್ 7 ರಂದು ಆಚರಿಸಲಾಗುತ್ತದೆ. ಈ ದಿನವು ಕೈಮಗ್ಗ ನೇಕಾರರನ್ನು ಗೌರವಿಸುತ್ತದೆ ಮತ್ತು ದೇಶದ ಆರ್ಥಿಕತೆ ಹಾಗೂ ಸಂಸ್ಕೃತಿಯಲ್ಲಿ ಅವರ ಪಾತ್ರವನ್ನು ಗುರುತಿಸುತ್ತದೆ. 1905 ರ ಸ್ವದೇಶಿ ಚಳವಳಿಯ ಸವಿನೆನಪಿಗಾಗಿ ಆಗಸ್ಟ್ 7 ಅನ್ನು 'ರಾಷ್ಟ್ರೀಯ ಕೈಮಗ್ಗ ದಿನ'ವನ್ನಾಗಿ ಆಚರಿಸಲು ನಿರ್ಧರಿಸಿದ ಕೇಂದ್ರ ಸರ್ಕಾರದ ಕ್ರಮ ಸ್ವಾಗತಾರ್ಹ. ಕೈಮಗ್ಗ ಕ್ಷೇತ್ರದಲ್ಲಿ ಹೊಸ ಉತ್ಪನ್ನಗಳನ್ನು ಆವಿಷ್ಕರಿಸಿದವರಿಗೆ ಈ ವರ್ಷದಿಂದ ಸಂತ ಕಬೀರ್ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಕೂಡ ಶ್ಲಾಘನೀಯ. ವಿದ್ಯುತ್ ಮಗ್ಗಗಳಿಗೆ ಪೈಪೋಟಿ ನೀಡಲಾಗದೆ ಸಾಂಪ್ರದಾಯಿಕ ಕೈಮಗ್ಗಗಳು ಈಗ ಅಲ್ಲೊಂದು ಇಲ್ಲೊಂದು ಕಾಣಸಿಗುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಕೈ ಮಗ್ಗ ಉತ್ತೇಜನ ಅವಶ್ಯಕ. ಇದು ಸರಕಾರದ ಜವಾಬ್ದಾರಿಯೂ ಹೌದು.

ಕೈಮಗ್ಗದ ಕುರಿತ ಚಿಂತನೆ ಕೇವಲ ಒಂದು ದಿನ ಆಚರಣೆಗೆ ಸೀಮಿತವಾಗದೇ ಅಲ್ಲಿರುವ ಸಮಸ್ಯೆಗಳು, ಅದರ ಪರಿಹಾರಾತ್ಮಕ ಕ್ರಮಗಳತ್ತ ಆಳುವವರ ಇಚ್ಛಾಶಕ್ತಿ ಪ್ರದರ್ಶನವಾಗಬೇಕು. ಅವರ ಉತ್ಪನ್ನಗಳನ್ನು ಸರ್ಕಾರ ಖರೀದಿಸಿ, ಯೋಗ್ಯ ಬೆಲೆ ನೀಡಬೇಕು. ಶಾಲಾ ಮಕ್ಕಳು, ಸರ್ಕಾರಿ ಕಚೇರಿಗಳ ನೌಕರರ ಸಮವಸ್ತ್ರಗಳು ಕಡ್ಡಾಯವಾಗಿ ಕೈಮಗ್ಗದ ಉತ್ಪನ್ನಗಳೇ ಆಗುವಂತೆ ಕ್ರಮಕೈಗೊಳ್ಳಬೇಕು. ಆಗ ಮಾತ್ರ ಇಂಥ ಆಚರಣೆಗಳಿಗೆ ಅರ್ಥ ಬರುತ್ತದೆ.

ಕೈಮಗ್ಗ ಉದ್ಯಮವು ನಮ್ಮ ದೇಶದ ಪರಂಪರೆಯಾಗಿದೆ. ಭಾರತದ ಈ ಶ್ರೀಮಂತ ಪರಂಪರೆಯನ್ನು ಉಳಿಸಲು ಮತ್ತು ಕೈಮಗ್ಗದ ಪ್ರಾಮುಖ್ಯತೆಯನ್ನು ಜನರಿಗೆ ತಿಳಿಸಲು ಪ್ರತಿ ವರ್ಷ ಆಗಸ್ಟ್ 7 ರಂದು ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸಲಾಗುತ್ತದೆ. ಈ ದಿನದ ಆಚರಣೆ ಹೇಗೆ ಪ್ರಾರಂಭವಾಯಿತು. ಸಾಂದರ್ಭಿಕ ಚಿತ್ರ

ನಮ್ಮ ದೇಶದಲ್ಲಿ ಕೈಮಗ್ಗದ ಇತಿಹಾಸವು ಶತಮಾನಗಳಿಗೂ ಹಿಂದಿನದು. ಕೈಮಗ್ಗ ಉದ್ಯಮವು ಭಾರತದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಭಾಗವಾಗಿದೆ. ಕೈಮಗ್ಗ ಎಂದಾಗ ಮೊದಲಿಗೆ ನೆನಪಿಗೆ ಬರುವಂತಹದ್ದೇ ಕೈಮಗ್ಗದ ಸೀರೆಗಳು. ಆಂಧ್ರಪ್ರದೇಶದ ಕಲಮಕಾರಿ, ಕರ್ನಾಟಕದ ಮೈಸೂರು ರೇಶ್ಮೆ ಸೀರೆ, ಗುಜರಾತ್‌ನ ಬಂಧನಿ, ತಮಿಳುನಾಡಿನ ಕಾಂಜೀವರಂ, ಮಹರಾಷ್ಟ್ರದ ಪೈಥಾನಿ, ಮಧ್ಯಪ್ರೇಶದ ಚಮದೇರಿ, ಬಿಹಾರದ ಭಾಗಲ್ಪುರಿ ರೇಷ್ಮೆ ಇಂತಹ ಕೆಲವು ಕೈಮಗ್ಗದ ಉತ್ಪನ್ನಗಳು ಪ್ರಪಂಚದಾದ್ಯಂತ ಪ್ರಸಿದ್ಧವಾಗಿದೆ. ಕೈಮಗ್ಗ ಉದ್ಯಮವು ಹೆಚ್ಚಿನ ಸಂಖ್ಯೆಯ ಜನರಿಗೆ ಉದ್ಯೋಗವನ್ನು ಒದಗಿಸಿಕೊಡುತ್ತದೆ. ಅಲ್ಲದೆ ಇದು ಮಹಿಳಾ ಸಬಲೀಕರಣವನ್ನು ಬಿಂಬಿಸುವ ಕ್ಷೇತ್ರವಾಗಿದೆ. ಇಂತಹ ಅದ್ಭುತ ಇತಿಹಾಸವಿರುವ ಕೈಮಗ್ಗ ಕ್ಷೇತ್ರವು ಇಂದು ತಂತ್ರಜ್ಞಾನದ ಕಾರಣದಿಂದ ಹಾಗೂ ಪಾಶ್ಚಿಮಾತ್ಯ ಉಡುಗೆಗಳ ಪ್ರಭಾವದ ಕಾರಣದಿಂದ ಕುಂಠಿತಗೊಳ್ಳುತ್ತಿದೆ. ಹಾಗಾಗಿ ದೇಶದಲ್ಲಿ ಕೈಮಗ್ಗ ಉದ್ಯಮವನ್ನು ಬಲಪಡಿಸಲು ಮತ್ತು ಕೈಮಗ್ಗದ ಉತ್ಪನ್ನಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಭಾರತದಲ್ಲಿ ಪ್ರತಿ ವರ್ಷ ಆಗಸ್ಟ್ 7 ರಂದು ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸಲಾಗುತ್ತದೆ.

**ರಾಷ್ಟ್ರೀಯ ಕೈಮಗ್ಗ ದಿನದ ಆಚರಣೆಯ ಹಿಂದಿನ ಇತಿಹಾಸ :**

1905, ಆಗಸ್ಟ್ 7 ರಂದು ನಡೆದ ಸ್ವದೇಶಿ ಚಳುವಳಿಯು ಭಾರತದ ಸ್ವಾತಂತ್ರ್ಯ ಹೋರಾಟದ ಅನೇಕ ಚಳುವಳಿಗಳಲ್ಲಿ ಒಂದಾಗಿದೆ. ಕಲ್ಕತ್ತಾ ಟೌನ್ ಹಾಲ್‌ನಲ್ಲಿ ಪ್ರಾರಂಭವಾದ ಈ ಚಳುವಳಿಯು ಬಂಗಾಳವನ್ನು ವಿಭಜಿಸುವ ಬ್ರಿಟೀಷ್ ಸರ್ಕಾರದ ನಿರ್ಧಾರದ ವಿರುದ್ಧದ ಪ್ರತಿಭಟನೆಯಾಗಿತ್ತು. ಅಲ್ಲದೆ ಮುಖ್ಯವಾಗಿ ಬ್ರಿಟೀಷರ ಹಾಗೂ ವಿದೇಶಿ ಉತ್ಪನ್ನಗಳನ್ನು ನಿಷೇಧಿಸಿ ಸ್ಥಳೀಯ ಕೈಗಾರಿಕೆಗಳನ್ನು ಉತ್ತೇಜಿಸಲು ಮತ್ತು ಜನರಲ್ಲಿ ಸ್ವದೇಶಿ ಉತ್ಪನ್ನಗಳ ಭಾವನೆಗಳನ್ನು ಜಾಗೃತಗೊಳಿಸಲು ಈ ಚಳುವಳಿಯನ್ನು ಪ್ರಾರಂಭಿಸಲಾಯಿತು. ಈ ಆಂದೋಲನದಲ್ಲಿ ಹೆಚ್ಚಿನ ಸಂಖ್ಯೆಯ ಕೈಮಗ್ಗ ನೇಕಾರರು ಪ್ರಮುಖ ಪಾತ್ರ ವಹಿಸಿದ್ದರು.

**ಕೈ ಮಗ್ಗ ದಿನವನ್ನು ಆಚರಿಸುವ ಉದ್ದೇಶ :**

ಕೈಮಗ್ಗ ದಿನವನ್ನು ಆಚರಿಸುವ ಮುಖ್ಯ ಉದ್ದೇಶವೆಂದರೆ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಉತ್ತೇಜಿಸುವುದು ಹಾಗೂ ನೇಕಾರರ ಸಮುದಾಯವನ್ನು ಗೌರವಿಸಲು ಮತ್ತು ಭಾರತದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಅವರ ಕೊಡುಗೆಯನ್ನು ಗುರುತಿಲು ಕೈಮಗ್ಗದ ದಿನವನ್ನು ಆಚರಿಸಲಾಗುತ್ತದೆ.

ಭಾರತದಲ್ಲಿ ಕೈಮಗ್ಗ ಉದ್ಯಮದ ಇತಿಹಾಸವು ಬಹಳ ಹಳೆಯದು. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಈ ಉದ್ಯಮವು ನೇಕಾರರಿಗೆ ಜೀವನೋಪಾಯವನ್ನು ಒದಗಿಸುತ್ತಿದೆ. ಕೈಮಗ್ಗದ ಉತ್ಪನ್ನಗಳು ದೊಡ್ಡ ಪ್ರಮಾಣದಲ್ಲಿ ವಿದೇಶಗಳಿಗೂ ರಫ್ತಾಗುತ್ತವೆ. ಈ ಉದ್ಯಮದಿಂದ ಲಕ್ಷಾಂತರ ಜನರು ತಮ್ಮ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ. ಜೊತೆಗೆ ಪ್ರಸ್ತುತ ದಿನಗಳಲ್ಲಿ ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯಿಂದ ಕೈಮಗ್ಗದ ಉತ್ಪನ್ನಗಳು ಕಡಿಮೆಯಾಗುತ್ತಿವೆ. ಹಾಗಾಗಿ ರಾಷ್ಟ್ರೀಯ ಕೈಮಗ್ಗ ದಿನದ ಮೂಲಕ ಕೈಮಗ್ಗದಿಂದ ತಯಾರಿಸಿದ ಉತ್ಪನ್ನಗಳ ಪ್ರಾಮುಖ್ಯತೆಯ ಬಗ್ಗೆ ದೇಶದ ಜನರಿಗೆ ಅರಿವು ಮೂಡಿಸಲಾಗುತ್ತಿದೆ. ಇದರಿಂದ ಗರಿಷ್ಠ ಮಟ್ಟದಲ್ಲಿ ಕೈಮಗ್ಗದಿಂದ ತಯಾರಿಸಿದ ಉತ್ಪನ್ನಗಳನ್ನು ಖರೀದಿಸುವ ಮೂಲಕ ನೇಕಾರರ ಉದ್ಯೋಗಕ್ಕೂ ಸಹಾಯವಾಗಬಹುದು. ಓಂ





# ವಿಕ್ರಮ್ ಸಾರಾಭಾಯ್

ವಿಕ್ರಮ್ ಸಾರಾಭಾಯ್ (ಜನನ ಆಗಸ್ಟ್ 12, 1919, ಅಹಮದಾಬಾದ್, ಭಾರತ– ಮರಣ ಡಿಸೆಂಬರ್ 30, 1971, ಕೋವಲಂ) ಒಬ್ಬ ಭಾರತೀಯ ಭೌತಶಾಸ್ತ್ರಜ್ಞ ಮತ್ತು ಕೈಗಾರಿಕೋದ್ಯಮಿ, ಅವರು ಬಾಹ್ಯಾಕಾಶ ಸಂಶೋಧನೆಯನ್ನು ಪ್ರಾರಂಭಿಸಿದರು ಮತ್ತು ಅಭಿವೃದ್ಧಿಗೆ ಸಹಾಯ ಮಾಡಿದರು.

ಸಾರಾಭಾಯ್ ಕೈಗಾರಿಕೋದ್ಯಮಿಗಳ ಕುಟುಂಬದಲ್ಲಿ ಜನಿಸಿದರು. ಅವರು ಅಹಮದಾಬಾದ್‌ನ ಗುಜರಾತ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು, ಆದರೆ ನಂತರ ಇಂಗ್ಲೆಂಡ್‌ನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಸ್ಥಳಾಂತರಗೊಂಡರು, ಅಲ್ಲಿ ಅವರು 1940 ರಲ್ಲಿ ನೈಸರ್ಗಿಕ ವಿಜ್ಞಾನದಲ್ಲಿ ತಮ್ಮ ಟ್ರಿಪೋಗಳನ್ನು ಪಡೆದರು. ವಿಶ್ವ ಸಮರ 2 ಅವರನ್ನು ಭಾರತಕ್ಕೆ ಮರಳಲು ಒತ್ತಾಯಿಸಿತು, ಅಲ್ಲಿ ಅವರು ಭೌತಶಾಸ್ತ್ರಜ್ಞ ಸರ್ ಚಂದ್ರಶೇಖರ ಅವರ ಅಡಿಯಲ್ಲಿ ಕಾಸ್ಮಿಕ್ ಕಿರಣಗಳ ಸಂಶೋಧನೆಯನ್ನು ಕೈಗೊಂಡರು. ವೆಂಕಟ ರಾಮನ್ ನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು (ಬೆಂಗಳೂರು). 1945 ರಲ್ಲಿ ಅವರು ಡಾಕ್ಟರೇಟ್ ಪಡೆಯಲು ಕೇಂಬ್ರಿಡ್ಜ್‌ಗೆ ಹಿಂದಿರುಗಿದರು ಮತ್ತು 1947 ರಲ್ಲಿ "ಕಾಸ್ಮಿಕ್ ರೇ ಇನ್ವೆಸ್ಟಿಗೇಶನ್ಸ್ ಇನ್ ಟ್ರಾಪಿಕಲ್ ಅಕ್ಷಾಂಶಗಳು" ಎಂಬ ಪ್ರಬಂಧವನ್ನು ಬರೆದರು. ಅವರು ಭಾರತಕ್ಕೆ ಹಿಂದಿರುಗಿದ ನಂತರ ಅಹಮದಾಬಾದ್‌ನಲ್ಲಿ ಭೌತಿಕ ಸಂಶೋಧನಾ ಪ್ರಯೋಗಾಲಯವನ್ನು ಸ್ಥಾಪಿಸಿದರು.

ಮೈಕೆಲ್ ಫ್ಯಾರಡೆ (ಎಲ್) ಇಂಗ್ಲಿಷ್ ಭೌತಶಾಸ್ತ್ರಜ್ಞ ಮತ್ತು ರಸಾಯನಶಾಸ್ತ್ರಜ್ಞ (ವಿದ್ಯುತ್ಕಾಂತೀಯತೆ) ಮತ್ತು ಜಾನ್ ಫ್ರೆಡೆರಿಕ್ ಡೇನಿಯಲ್ (ಆರ್) ಬ್ರಿಟಿಷ್ ರಸಾಯನಶಾಸ್ತ್ರಜ್ಞ ಮತ್ತು ಡೇನಿಯಲ್ ಕೋಶವನ್ನು ಕಂಡುಹಿಡಿದ ಹವಾಮಾನಶಾಸ್ತ್ರಜ್ಞ.

ಸಾರಾಭಾಯ್ ಅವರ ಆಸಕ್ತಿಗಳ ವ್ಯಾಪ್ತಿ ಮತ್ತು ವಿಸ್ತಾರವು ಗಮನಾರ್ಹವಾಗಿತ್ತು. ವೈಜ್ಞಾನಿಕ ಸಂಶೋಧನೆಯಲ್ಲಿ ಅವರ ತೀವ್ರವಾದ ಒಳಗೊಳ್ಳುವಿಕೆಯ ಹೊರತಾಗಿಯೂ, ಅವರು ಉದ್ಯಮ, ವ್ಯಾಪಾರ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ಸಕ್ರಿಯ ಆಸಕ್ತಿಯನ್ನು ಪಡೆದರು. ಸಾರಾಭಾಯ್ ಅವರು 1947 ರಲ್ಲಿ ಅಹಮದಾಬಾದ್ ಟೆಕ್ಸ್ಟೈಲ್ ಇಂಡಸ್ಟ್ರೀಸ್ ರಿಸರ್ಚ್ ಅಸೋಸಿಯೇಶನ್ ಅನ್ನು ಸ್ಥಾಪಿಸಿದರು. 1956 ರವರೆಗೆ ಅದರ ವ್ಯವಹಾರಗಳನ್ನು ನೋಡಿಕೊಂಡರು. ಭಾರತದಲ್ಲಿ ವೃತ್ತಿಪರ ನಿರ್ವಹಣಾ ಶಿಕ್ಷಣದ ಅಗತ್ಯವನ್ನು ಅರಿತುಕೊಂಡ ಸಾರಾಭಾಯ್ 1962 ರಲ್ಲಿ ಅಹಮದಾಬಾದ್‌ನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

1962 ರಲ್ಲಿ ಬಾಹ್ಯಾಕಾಶ ಸಂಶೋಧನೆಗಾಗಿ ಭಾರತೀಯ ರಾಷ್ಟ್ರೀಯ ಸಮಿತಿಯನ್ನು ಸ್ಥಾಪಿಸುವುದು, ನಂತರ ಅದನ್ನು ಮರುನಾಮಕರಣ ಮಾಡಲಾಯಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO), ಸಾರಾಭಾಯ್ ದಕ್ಷಿಣ ಭಾರತದಲ್ಲಿ ತುಂಬ ಈಕ್ವಟೋರಿಯಲ್ ರಾಕೆಟ್ ಉಡಾವಣಾ ಕೇಂದ್ರವನ್ನು ಸಹ ಸ್ಥಾಪಿಸಿದರು. ಭೌತಶಾಸ್ತ್ರಜ್ಞನ ಮರಣದ ನಂತರ 1966 ರಲ್ಲಿ ಹೋಮಿ ಭಾಭಾ, ಸಾರಾಭಾಯ್ ಅಧ್ಯಕ್ಷರಾಗಿ ನೇಮಕಗೊಂಡರು. ಭಾರತದ ಪರಮಾಣು ಶಕ್ತಿ ಆಯೋಗ. ಪರಮಾಣು ಸಂಶೋಧನೆಯ ಕ್ಷೇತ್ರದಲ್ಲಿ ಭಾಭಾ ಅವರ ಕೆಲಸವನ್ನು ಮುಂದುವರೆಸುತ್ತಾ, ಸಾರಾಭಾಯ್ ಅವರು ಭಾರತದ ಪರಮಾಣು ವಿದ್ಯುತ್ ಸ್ಥಾವರಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಬಹುಪಾಲು ಕಾರಣರಾಗಿದ್ದರು. ರಕ್ಷಣಾ ಉದ್ದೇಶಗಳಿಗಾಗಿ ಪರಮಾಣು ತಂತ್ರಜ್ಞಾನದ ಸ್ಥಳೀಯ ಅಭಿವೃದ್ಧಿಗೆ ಅವರು ಅಡಿಪಾಯ ಹಾಕಿದರು.

ಸಾಮಾನ್ಯವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಎಲ್ಲಾ ಅಂಶಗಳ ಬಳಕೆಗೆ ಮತ್ತು ನಿರ್ದಿಷ್ಟವಾಗಿ "ಅಭಿವೃದ್ಧಿಯ ಸನ್ನೆಕೋಲಿನ" ಬಾಹ್ಯಾಕಾಶ ಅಪ್ಲಿಕೇಶನ್‌ಗಳಿಗೆ ಮೀಸಲಾಗಿರುವ ಸಾರಾಭಾಯ್ ಉಪಗ್ರಹ ಸಂವಹನದ

**ಮನೆ ಮದ್ದು :**

ಜ್ಞಾನಮುದ್ರೆಯನ್ನು ಮಾಡುವುದರಿಂದ ಆಲೋಚನಾ ಶಕ್ತಿ ಬಲಗೊಂಡು ಕಿರಿಕಿರಿ ಮತ್ತು ಮಾನಸಿಕ ಖಾಯಿಲೆಗಳನ್ನು ತೊಡೆದುಹಾಕುತ್ತದೆ.

ಮೂಲಕ ದೂರದ ಹಳ್ಳಿಗಳಿಗೆ ಶಿಕ್ಷಣವನ್ನು ಕೊಂಡೊಯ್ಯುವ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು ಮತ್ತು ಉಪಗ್ರಹ ಆಧಾರಿತ ರಿಮೋಟ್ ಸೆನ್ಸಿಂಗ್ ಅಭಿವೃದ್ಧಿಗೆ ಕರೆ ನೀಡಿದರು.

ಸಾರಾಭಾಯ್ ಅವರಿಗೆ ಭಾರತದ ಎರಡು ಅತ್ಯುನ್ನತ ಗೌರವಗಳಾದ ಪದ್ಮಭೂಷಣ (1966) ಮತ್ತು ಪದ್ಮ ವಿಭೂಷಣ (1972 ರಲ್ಲಿ ಮರಣೋತ್ತರವಾಗಿ ನೀಡಲಾಯಿತು).

ಸಾರಾಭಾಯ್ ವಿದ್ಯಾಭ್ಯಾಸ ಮುಗಿಸುತ್ತಲೇ ಪ್ರದರ್ಶಕ ಕಲಾವಿದೆಯಾದರು ಮತ್ತು ಚಲನಚಿತ್ರ ನಟಿಯಾಗಿ ಖ್ಯಾತಿ ಗಳಿಸಿದರು. ಅವರು ಅನೇಕ ಹಿಂದಿ ಮತ್ತು ಗುಜರಾತಿ ಭಾಷೆಯ ಚಲನಚಿತ್ರಗಳಲ್ಲಿ ಕಾಣಿಸಿಕೊಂಡರು, ಅವುಗಳಲ್ಲಿ ಅತ್ಯಂತ ಸ್ಮರಣೀಯವಾದವುಗಳೆಂದರೆ ಮುತ್ತಿ ಭರ್ ಚಾವಲ್ (1975), ಹಿಮಾಲಯ ಸೆ ಊಂಚಾ (1975), ಮೇನಾ ಗುರ್ಜರಿ (1975), ಮನಿಯಾರೋ (1980), ಮತ್ತು ಕಥಾ (1983). ಅವರು ತಮ್ಮ ಚಲನಚಿತ್ರ ಕೆಲಸಕ್ಕಾಗಿ ಹಲವಾರು ವಿಮರ್ಶಕರ ಮತ್ತು ಸರ್ಕಾರಿ ನಟನಾ ಪ್ರಶಸ್ತಿಗಳನ್ನು ಗೆದ್ದರು ಮತ್ತು ದೂರದರ್ಶನದಲ್ಲಿ ಆಗಾಗ್ಗೆ ಪ್ರದರ್ಶನ ನೀಡಿದರು. 1984 ರಿಂದ 1989 ರವರೆಗೆ ಅವರು ಬ್ರಿಟಿಷ್ ನಿರ್ದೇಶಕರೊಂದಿಗೆ ಪ್ರಪಂಚವನ್ನು ಸುತ್ತಿದರು. ಪೀಟರ್ ಬ್ರೂಕ್ ಅವರ ಮಹಾಭಾರತದ ಸ್ಟೇಜ್ ರೂಪಾಂತರ, ಇದರಲ್ಲಿ ಅವರು ಮಹಿಳಾ ಪ್ರಮುಖ ಪಾತ್ರವನ್ನು ರಚಿಸಿದರು, ದ್ರೌಪದಿ. ಅವಳು ಬ್ರೂಕ್‌ನ 1989 ಚಿತ್ರೀಕರಿಸಿದ ಮಹಾಕಾವ್ಯದ ಆವೃತ್ತಿಯಲ್ಲಿ ಪಾತ್ರವನ್ನು ಪುನರಾವರ್ತಿಸಿದಳು.

ಸಾಮಾಜಿಕ ಕಾರ್ಯಕರ್ತೆಯಾಗಿ, ಸಾರಾಭಾಯ್, ಸ್ವತಂತ್ರವಾಗಿ ಮತ್ತು ದರ್ಪಣ ಮೂಲಕ, ಪರಿಸರ ಸಮಸ್ಯೆಗಳು, ಸಮುದಾಯ ಆರೋಗ್ಯ ಉಪಕ್ರಮಗಳು ಮತ್ತು ಮಹಿಳೆಯರ ಸಮಸ್ಯೆಗಳ ಕುರಿತು ಹಲವಾರು ಶೈಕ್ಷಣಿಕ ಯೋಜನೆಗಳನ್ನು ಸ್ಥಾಪಿಸಲು ಸ್ಥಳೀಯ ಸರ್ಕಾರಗಳು ಮತ್ತು ಯುನೆಸ್ಕೋದೊಂದಿಗೆ ಕೆಲಸ ಮಾಡಿದರು. 1997 ರಲ್ಲಿ ಕಲಾವಿದರ ನಡುವೆ ಸಂವಾದವನ್ನು ಉತ್ತೇಜಿಸಲು ಮತ್ತು ಅಹಿಂಸೆಯ ವಿಷಯದ ಬಗ್ಗೆ ಸೃಜನಶೀಲ ಯೋಜನೆಗಳಿಗೆ ಅನುಕೂಲವಾಗುವಂತೆ ದರ್ಪಣ ಅಕಾಡೆಮಿಯಲ್ಲಿ ನೆಲೆಗೊಂಡಿರುವ ಸೆಂಟರ್ ಫಾರ್ ಅಹಿಂಸೆ ಥ್ರೂ ದಿ ಆರ್ಟ್ಸ್ ಅನ್ನು ಸ್ಥಾಪಿಸಿದರು.

ಸಾರಾಭಾಯ್ ಚಲನಚಿತ್ರ, ವೇದಿಕೆ ಮತ್ತು ದೂರದರ್ಶನ ನಿರ್ಮಾಣಗಳಿಗಾಗಿ ಹಲವಾರು ಸ್ಕ್ರಿಪ್ಟ್‌ಗಳನ್ನು ಬರೆದರು ಮತ್ತು ವಾರಪತ್ರಿಕೆ ಅಂಕಣಗಳನ್ನು ಬರೆದರು ಟೈಮ್ಸ್ ಆಫ್ ಇಂಡಿಯಾ ಮತ್ತು ಗುಜರಾತ್ ಮಿತ್ರ ಅವರು ಹಲವಾರು ಪ್ರಕಟಣೆಗಳ ಸಂಪಾದಕರಾಗಿಯೂ ಸೇವೆ ಸಲ್ಲಿಸಿದರು. ಆಕೆಯ ಜೀವನ ಮತ್ತು ಕೃತಿಗಳನ್ನು ಪ್ರೈಡ್ ಆಫ್ ಇಂಡಿಯಾ (2002; ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ನಿರ್ಮಿಸಿದೆ) ಮತ್ತು ಮಲ್ಲಿಕಾ ಸಾರಾಭಾಯ್ (1999; ಅರುಣಾ ರಾಜೇ ಪಾಟೀಲ್ ನಿರ್ದೇಶನ) ಸಾಕ್ಷ್ಯಚಿತ್ರಗಳಲ್ಲಿ ಪರಿಗಣಿಸಲಾಗಿದೆ. ॐ

# ತ್ಯಾಗಮಯಿ ಅಜ್ಜಿ



ನಾನು ಚಿಕ್ಕವನಿದ್ದಾಗ (ಅಂದರೆ ಸುಮಾರು ಒಂದು ವರ್ಷದವನು). ಆಗ ನನ್ನ ಮುಂದೆ ಒಂದು ವಜ್ರ ಹೊಳೆಯುತಿತ್ತು. ಅದರ ಬೆಳಕಿನಲ್ಲಿದ್ದ ಶಾಂತಿ, ಸತ್ಯತೆ, ನ್ಯಾಯ, ನೀತಿ ಇನ್ನು ನನ್ನ ಹೃದಯದಲ್ಲಿದೆ. ಆ ಲಕ್ಷ್ಮಿ ಕಳೆಯ ವಜ್ರ ನನ್ನ ಮುಂದೆ ಇದ್ದದ್ದು ಬರಿ ಒಂದು ವರ್ಷದವರೆಗೆ. ಆದರೆ ಅದರ ಪ್ರಕಾಶ ಇನ್ನು ನನ್ನ ಮುಂದೆ ಹಾಗು ನನ್ನ ಹೃದಯದಲ್ಲಿದೆ. ದೇವರು ಕಟುಕ, ಆ ರತ್ನ ತನ್ನ ಜಾಗದಲ್ಲಿ ಅದ್ಭುತವಾಗಿ ಕಂಗೊಳಿಸುತ್ತದೆ ಎಂದು ಕಸಿದುಕೊಂಡು ಬಿಟ್ಟ. ಆದರೆ ಆ ರತ್ನದ ಬೆಳಕು ನನ್ನನ್ನು ಇಂದು ಸರಿಯಾದ ದಾರಿಯಲ್ಲಿ ಕರೆದುಕೊಂಡು ಹೋಗುತ್ತಿದೆ ಹಾಗು ಹೋಗುತ್ತಲೇ ಇರುತ್ತದೆ. ಆ ವಜ್ರವೇ ನನ್ನ ಲಕ್ಷ್ಮಮ್ಮ ಅಜ್ಜಿ. ಅವರು ಸತ್ತು 15 ವರ್ಷಗಳಾಗಿರಬಹುದು ಆದರೆ ಅವರ ಪ್ರೀತಿಯನ್ನು ನಾನು ದಿನಾಲೂ ನೆನೆಯುತ್ತೇನೆ. ನಾನಿಂದು ಇಷ್ಟು ಸಾಧನೆ ಮಾಡಿರುವುದು ಅವರಿಂದ. ಅಂತಹ ಮಹಾ ತ್ಯಾಗಮಯಿ ಆದ ನನ್ನ ಅಜ್ಜಿಗೆ ನಿನ್ನ ಮೊಮ್ಮಗನಿಂದ ಪ್ರೀತಿಯ ನಮನಗಳು. ॐ

–ಸಿದ್ಧಾರ್ಥ.ಟಿ.ಪಿ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**

|| Jai Sri Gurudev ||



# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or Equivalent Examination with 35% aggregate.



**OUR VISION:**

To Impart Quality Education
Transformation of Child through Excellent Education
Child Centered Education

*Hunt Your Dreams*

**Institution Code : 541**



**Salient Features**

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



**For Admissions, Contact :**

**PRINCIPAL**
**SJ BGS POLYTECHNIC,**
BGSIT CAMPUS, BG Nagar (Bellur Cross)
Nagamangala Taluk, Mandya District
Karnataka - 571 448

E-mail : ppl.sjbgsp@gmail.com
Web : www.sjbgsp.com
Cell No. : 9591735309, 9916736309

Registered with Registrar of News Papers for India No.KARKAN/2018/76081, **Sampreethi Samruddhi,** August - 2024.
License to post without prepayment. License No.**KA/BG/CNA/119/2022-2024,**
Date of publication: **28.07.2024.** Posted at **Magadi Sub Post Office-562120** on **29th** of every month




To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120